ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 285 RNI Number : KNKAN/25/A2770 29-10-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:285 ರಾಯಚೂರು 29-10-2026 ಗುರುವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಕೇಂದ್ರ, ಸರ್ಕಾರಿ ನೌಕರರಿಗೆ ಕೇಂದ್ರದಿಂದ ದೀಪಾವಳಿ ಉಡುಗೊರೆ: ಶೇ 3ರಷ್ಟು ಡಿಎ ಹೆಚ್ಚಳ ಮಾಡಿ ಆದೇಶ

ನವದೆಹಲಿ: ಕೇಂದ್ರ ಸರ್ಕಾರಿ ನೌಕರರಿಗೆ ಶೇ 3ರಷ್ಟು ತುಟ್ಟಿ ಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ಹೆಚ್ಚಳಕ್ಕೆ ಕೇಂದ್ರ ಸಚಿವ ಸಂಪುಟ ಅನುಮತಿ ನೀಡಿದೆ. ಈ ಹೆಚ್ಚಳ 2026ರ ಜುಲೈನಿಂದಲೇ ಅನ್ವಯವಾಗುವಂತೆ ಜಾರಿಗೆ ಬರಲಿದೆ.

ಡಿಎ ಮತ್ತು ಡಿಆರ್ ದರಗಳನ್ನು ಕ್ರಮವಾಗಿ ಮೂಲ ವೇತನ ಮತ್ತು ಪಿಂಚಣಿಯ ಶೇ 60ರಿಂದ ಶೇ 63ಕ್ಕೆ ಹೆಚ್ಚಿಸಲಿದೆ. ಈ ಹೆಚ್ಚಳದಿಂದ ದೇಶಾದ್ಯಂತ ಸುಮಾರು 48.54 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 68.71 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ಸರ್ಕಾರ ನೀಡಿರುವ ಮಾಹಿತಿ ಪ್ರಕಾರ, ಡಿಎ ಮತ್ತು ಡಿಆರ್ ಹೆಚ್ಚಳದಿಂದ ಕೇಂದ್ರ ಸರ್ಕಾರದ ಮೇಲೆ ಒಟ್ಟಾರೆ ವಾರ್ಷಿಕ 10,016.10 ಕೋಟಿ ರೂಗಳಷ್ಟು ಹೆಚ್ಚುವರಿ ಹೊರೆ ಬೀಳಲಿದೆ. 7ನೇ ಕೇಂದ್ರ ವೇತನ ಆಯೋಗದ ಶಿಫಾರಸಿನ ಅನುಸಾರ ಡಿಎ ಮತ್ತು ಡಿಆರ್‌ನ ಹೆಚ್ಚುವರಿ ಕಂತನ್ನು ಮಂಜೂರು ಮಾಡಲಾಗಿದೆ.

ಸರ್ಕಾರಿ ನೌಕರರ ಜೀವನ ವೆಚ್ಚದ ಮೇಲೆ ಹಣದುಬ್ಬರವು ಬೀರುವ ಪರಿಣಾಮವನ್ನು ಸರಿದೂಗಿಸಲು ಅವರಿಗೆ ತುಟ್ಟಿ ಭತ್ಯೆಯನ್ನು ನೀಡಲಾಗುತ್ತದೆ. ಅದೇ ರೀತಿ ಪಿಂಚಣಿದಾರರಿಗೆ ತುಟ್ಟಿ ಪರಿಹಾರ ನೀಡಲಾಗುವುದು ಬೆಲೆ ಏರಿಕೆಯು ತಮ್ಮ ಪಿಂಚಣಿ ಆದಾಯದ ಮೇಲೆ ಬೀರುವ ಪರಿಣಾಮವನ್ನು ನಿಭಾಯಿಸಲು ಇದು ಅವರಿಗೆ ಸಹಾಯ ಮಾಡುತ್ತದೆ. ಡಿಎ ಮೂಲ ವೇತನದ ಮೇಲೆ ನಿರ್ಧರಿಸಲಾಗುತ್ತದೆ ಮತ್ತು ಇದನ್ನು ಮೂಲ ವೇತನಕ್ಕೆ ಸೇರಿಸಲಾಗುತ್ತದೆ.

ಸರ್ಕಾರವು ಸಾಮಾನ್ಯವಾಗಿ ವರ್ಷದಲ್ಲಿ ಎರಡು ಬಾರಿ ಜನವರಿ ಮತ್ತು ಜುಲೈ ತಿಂಗಳಲ್ಲಿ ಡಿಎ ಪರಿಷ್ಕರಿಸುತ್ತದೆ. ಹಣದುಬ್ಬರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಕೇಂದ್ರ ಈ ಡಿಎ ಹೆಚ್ಚಳದ ನಿರ್ಧಾರ ತೆಗೆದುಕೊಳ್ಳುತ್ತದೆ. ಇದೀಗ ಜುಲೈ ತಿಂಗಳಿಂದ ಪೂರ್ವಾನ್ವಯವಾಗುವಂತೆ ಡಿಎ ಮತ್ತು ಡಿಆರ್ ಅನ್ನು ಘೋಷಿಸಲಾಗಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಕೇಂದ್ರ ಸರ್ಕಾರಿ ನೌಕರರಿಗೆ ಹೆಚ್ಚುವರಿ ಕಂತು ತುಟ್ಟಿ ಭತ್ಯೆ (ಡಿಎ) ಮತ್ತು ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ಬಿಡುಗಡೆ ಮಾಡಲು ಅನುಮೋದನೆ ನೀಡಿದೆ. ಜುಲೈ 1 ರಿಂದ ಅನ್ವಯವಾಗುವಂತೆ, ಪ್ರಸ್ತುತ ಇರುವ ಮೂಲ ಭತ್ಯೆಯ ಶೇ 60 ರಿಂದ 63ಕ್ಕೆ ಹೆಚ್ಚಿಸಿ ನೀಡಲಾಗುವುದು ಎಂದು ತಿಳಿಸಿದೆ.

ಪ್ರಜ್ಞಾವಂತರೇ ಮರೆತರೆ ಮತದಾನದ ಮಹತ್ವ?: ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ 10,245 ಮತಗಳು ಅಸಿಂಧು!

ಹುಬ್ಬಳ್ಳಿ: ಪ್ರಜ್ಞಾವಂತ ಮತದಾರರು, ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಾಮರ್ಥ್ಯ ಹೊಂದಿರುವವರು ಎಂಬ ಆಶಯದೊಂದಿಗೆ ವಿಧಾನ ಪರಿಷತ್‌ನ ಪದವೀಧರ ಕ್ಷೇತ್ರಗಳಿಗೆ ಪದವೀಧರರನ್ನೇ ಮತದಾರರನ್ನಾಗಿ ಮಾಡಲಾಗಿದೆ. ಆದರೆ, ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸಾವಿರಾರು ಮತಗಳು ಅಸಿಂಧುಗೊಂಡಿರುವುದು ಮತದಾನದ ಮಹತ್ವ ಹಾಗೂ ಮತದಾರರ ಜವಾಬ್ದಾರಿಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು 73,691 ಮತಗಳ ಪೈಕಿ 63,446 ಮತಗಳು ಮಾತ್ರ ಮಾನ್ಯವಾಗಿದ್ದು, ಬರೋಬ್ಬರಿ 10,245 ಮತಗಳು ತಿರಸ್ಕೃತಗೊಂಡಿವೆ. ಅಂದರೆ, ಚಲಾವಣೆಯಾದ ಮತಗಳಲ್ಲಿ ಶೇ.13.91ರಷ್ಟು ಮತಗಳು ಅಸಿಂಧುವಾಗಿವೆ. ಪದವೀಧರರೇ ಈ ಪ್ರಮಾಣದಲ್ಲಿ ಮತಗಳನ್ನು ಅಸಿಂಧುಗೊಳಿಸಿರುವುದು ವಿಪರ್ಯಾಸಕ್ಕೆ ಕಾರಣವಾಗಿದೆ.

ಮತಪತ್ರದಲ್ಲಿ 'ಐ ಲವ್ ಯು ಸಂಕನೂರ ಸರ್', 'ಪಕ್ಷ ಯಾಕೆ ಬಿಟ್ಟದ್ದೀರಿ?': ಮತಪತ್ರದಲ್ಲಿ ತಮ್ಮ ಆಯ್ಕೆಯ ಅಭ್ಯರ್ಥಿಗೆ ಆದ್ಯತೆಯ ಸಂಖ್ಯೆಯನ್ನು ನಮೂದಿಸಬೇಕಾದ ಮತದಾರರು, ಕೆಲವೆಡೆ 'ಐ ಲವ್ ಯು ಸಂಕನೂರ ಸರ್', 'ಪಕ್ಷ ಯಾಕೆ ಬಿಟ್ಟದ್ದೀರಿ?' ಎಂಬಂತಹ ಸಂದೇಶಗಳನ್ನು ಬರೆದಿರುವುದು ಕಂಡುಬಂದಿದೆ. ಇನ್ನೂ ಕೆಲವು ಮತಪತ್ರಗಳಲ್ಲಿ ಪಾಸ್ ಮಾರ್ಕ್, ಕಟ್ ಮಾರ್ಕ್, ಲವ್ ಚಿಹ್ನೆ ಹಾಗೂ ಸಹಿಗಳನ್ನು ಹಾಕಿರುವುದು ಬೆಳಕಿಗೆ ಬಂದಿದೆ. ಇಂತಹ ಬರಹಗಳು ಮತ್ತು ಗುರುತುಗಳಿಂದಾಗಿ ಹಲವು ಮತಗಳು ಅಸಿಂಧುಗೊಂಡಿವೆ.

ಮತದಾರರು ತಮ್ಮ ಅಮೂಲ್ಯ ಮತವನ್ನು ತಮಗಿಷ್ಟವಾದ ಅಭ್ಯರ್ಥಿಗೆ

3ನೇಯ ಪುಟಕ್ಕೆ

ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷ ಗತಿಸಿದರು ಲಿಂಗಸಗೂರು ತಾಲೂಕಿನಲ್ಲಿ ಇನ್ನು ಅಸ್ಪೃಶ್ಯತೆ ಜೀವಂತ

ಲಿಂಗಸಗೂರು : ಅ 28 -

ದಲಿತ ಯುವಕನಿಗೆ ಕುಡಿಯಲು ನೀರು ಎತ್ತಿ ಹಾಕಿ ಅಸ್ಪೃಶ್ಯತೆ ಆಚರಿಸಿದ ವೀರಭದ್ರಪ್ಪ ಗೌಡ ವಿರುದ್ಧ ಸ್ವಯಂಪ್ರೇರಿತ ಸುಮಟೋ ಕೇಸ್ ದಾಖಲಿಸುವಂತೆ ಅಂಬೇಡ್ಕರ್ ಸೇನೆ ಒತ್ತಾಯಿಸಿದೆ.

ತಾಲೂಕಿನ ಕಾಳಾಪೂರ ಗ್ರಾಮ ಪಂಚಾಯಿತಿ ಎದುರಿನ ಹೋಟೆಲ್ ನಲ್ಲಿ ನಡೆದಿರುವ ಅಮಾನವೀಯ ಘಟನೆ ಕಾಳಾಪೂರದ ನಿವಾಸಿ ಚಿದಾನಂದ (ದಲಿತ ಸಮುದಾಯ) ಅವರು ಹೋಟೆಲ್ ನಲ್ಲಿ ನಾಷ್ಟಾ ಮಾಡಿ ನೀರು ಕೇಳಿದ್ದಾರೆ. ಆಗ ಹೋಟೆಲ್ ಮಾಲೀಕ ವೀರಭದ್ರಪ್ಪ ಗೌಡ ಅವರು ಅವರ ಕೈಗೆ ನೀರಿನ ಲೋಟ ಕೊಡದೆ, ಸುಮಾರು 3 ಅಡಿ ಎತ್ತರದಿಂದ ನೀರನ್ನು ಅವರ ಅಂಗೈಗೆ ಎತ್ತಿ ಹಾಕಿದ್ದಾರೆ. ಸಂತ್ರಸ್ತರು ಬಗ್ಗಿ, ಕೈ ಒಡ್ಡಿ ನೀರು ಕುಡಿಯುವಂತೆ ಮಾಡಲಾಗಿದೆ. ಇದು ವಿಡಿಯೋದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇದು ಎರಡು ನೋಟ ಪದ್ಧತಿ ಮತ್ತು ಅಸ್ಪೃಶ್ಯತೆಯ ಪರಮಾವಧಿ ಅಸ್ಪೃಶ್ಯತೆ ಆಚರಿಸಿದ ವೀರಭದ್ರಪ್ಪ ಗೌಡ ವಿರುದ್ದ ಸ್ವಯಂ ಪ್ರೇರಿತವಾಗಿ ಸುಮಟೋ ಕೇಸ್ ದಾಖಳಿಸಿ ಕೊಳ್ಳಬೇಕೆಂದು

ಅಂಬೇಡ್ಕರ್ ಸೇನೆಯ ತಾಲೂಕ ಅಧ್ಯಕ್ಷ ಗದ್ದೆಪ್ಪ ಚಿತ್ತಾಪುರ ಡಿ ವೈ ಎಸ್ ಪಿ ಸುಲೈಮಾನ್ ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿದರು .

ಇದು ಯಾವ ಕಾನೂನಿನಡಿ ಅಪರಾಧ

3ನೇಯ ಪುಟಕ್ಕೆ



ರೈತರು ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ತುರ್ತು ಪರಿಹಾರಕ್ಕೆ ಒತ್ತಾಯ

ರಾಯಚೂರು,ಅ.28-

ಜಿಲ್ಲೆಯಲ್ಲಿ ತೀವ್ರ ಬರಗಾಲ ಎದುರಾಗಿದ್ದು,ರೈತರು ಕೃಷಿಕಾಮಿರ್ಕರು ಹಾಗೂ ಜಾನುವಾರಗಳ ಸಮಸ್ಯೆಗಳಿಗೆ ತುರ್ತು ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಶಿವ ಸೇನಾ ಕರ್ನಾಟಕ ಮುಖಂಡರು ಟಿಪ್ಪು ಸುಲ್ತಾನ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.



ಮುಂಗಾರು ವೈಫಲ್ಯದಿಂದ ರೈತರು ಕಾರ್ಮಿಕರು ತೀವ್ರ ಆರ್ಥಿಕ ತೊಂದರೆ ಸಿಲುಕಿದ್ದು ಬರ ಪರಿಹಾರ ವಿತರಣೆ ತಕ್ಷಣವೇ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ರೈತರು, ಕೃಷಿ ಕಾರ್ಮಿಕರು ಹಾಗೂ ಗ್ರಾಮೀಣ ಜನರಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಮಳೆ ಕೊರತೆ ಹಾಗೂ ಇತರ ನೈಸರ್ಗಿಕ ಕಾರಣಗಳಿಂದ ಬೆಳೆ ನಷ್ಟ ಅನುಭವಿಸಿರುವ ರೈತರ ಜಮೀನುಗಳ ವೈಜಾನಿಕ ಸಮೀಕ್ಷೆ ನಡೆಸಿ, ಪ್ರಮಾಣಕ್ಕೆ ಅನುಗುಣವಾಗಿ ಎಕರೆಗೆ 50,ಸಾವಿರ ವರೆಗೆ ಪರಿಹಾರ ನೀಡಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಕೃಷಿ ಸಾಲಮನ್ನಾ ಮಾಡಬೇಕು.

ಸಾಲದ ಹೊರೆಯಿಂದ ಸಂಕಷ್ಟದಲ್ಲಿರುವ ರೈತರ ಅರ್ಹ ಕೃಷಿ ಸಾಲಗಳನ್ನು ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಬೇಕು.

ತುಂಗಭದ್ರಾ ಎಡದಂಡೆ ಕಾಲುವೆ, ನಾರಾಯಣಪುರ ಬಲದಂಡೆ ಕಾಲುವೆ ಹಾಗೂ ಸಂಬಂಧಿತ ಉಪಕಾಲುವೆಗಳ ಮೂಲಕ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಸಂಬಂಧಪಟ್ಟ ನೀರಾಜರಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು.

ಪಂಪ್ ಸೆಟ್‌ಗಳಿಗೆ ನಿಗದಿತ ವೇಳಾಪಟ್ಟಿಯಂತೆ ದಿನಕ್ಕೆ 12 ಗಂಟೆಗಳ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಕ್ರಮ ಕೈಗೊಳ್ಳಬೇಕು.ಭತ್ತ, ಹತ್ತಿ, ಜೋಳ, ತೊಗರಿ, ಮೆಣಸಿನಕಾಯಿ ಸೇರಿದಂತೆ ಇತರ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಹಾಗೂ ಅರ್ಹ ಉತ್ಪನ್ನಗಳ ಸರ್ಕಾರಿ ಖರೀದಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಕ್ರಮ ಕೈಗೊಳ್ಳಬೇಕು.ಸರ್ಕಾರಿ ಖರೀದಿ ಕೇಂದ್ರಗಳಲ್ಲಿ ಕೃಷಿ ಉತ್ಪನ್ನಗಳನ್ನು

3ನೇಯ ಪುಟಕ್ಕೆ

ರಾಯಚೂರು ತಾಲೂಕಿನ 53 ಹಾಗೂ 54ನೇ ಮತ ಕ್ಷೇತ್ರಗಳಲ್ಲಿ ಎಸ್.ಐ.ಆರ್. ಪ್ರಕ್ರಿಯೆ ಅಚ್ಚುಕಟ್ಟಾಗಿ ನಿರ್ವಹಣೆ: ತಹಶೀಲ್ದಾರ್ ಸುರೇಶ ವರ್ಮಾ

ರಾಯಚೂರು,ಅ.28

ರಾಯಚೂರು ತಾಲೂಕಿನ 53ನೇ ಗ್ರಾಮೀಣ ಮತ್ತು 54ನೇ ನಗರ ಮತ ಕ್ಷೇತ್ರಗಳ ಎಸ್.ಐ.ಆರ್. ಪ್ರಕ್ರಿಯೆಯು ಸಂಪೂರ್ಣವಾಗಿ, ಶಾಂತ ರೀತಿಯಲ್ಲಿ ಮತ್ತು ಅಚ್ಚುಕಟ್ಟಾಗಿ ನಿರ್ವಹಿಸಲ್ಪಟ್ಟಿದೆ ಎಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ತಿಳಿಸಿದ್ದಾರೆ.

ಅಕ್ಟೋಬರ್ 28ರ ಬುಧವಾರ ದಂದು ನಗರದ ಮಹಾನಗರ ಪಾಲಿಕೆಯ ಹಳೆ ಕಟ್ಟಡದ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ಎಸ್‌ಐಆರ್ ಕುರಿತು ಮಾಹಿತಿ ನೀಡಿ, ಅವರು ಮಾತನಾಡಿದರು.



ರಾಯಚೂರು ಗ್ರಾಮೀಣ ಮತ ಕ್ಷೇತ್ರ ಸಂಖ್ಯೆ 53ರಲ್ಲಿ ಎಸ್.ಐ. ಆರ್. ಪ್ರಕ್ರಿಯೆಗಿಂತ ಮುಂಚೆ ಒಟ್ಟು 275 ಮತಗಟ್ಟೆಗಳು ಇದ್ದು, ಎಸ್.ಐ.ಆರ್. ನಂತರ 3 ಮತಗಟ್ಟೆಗಳು ಹೆಚ್ಚಾಗಿ ಒಟ್ಟು 278 ಮತಗಟ್ಟೆಗಳಾಗಿ ರೂಪುಗೊಂಡಿವೆ. ಎಸ್.ಐ. ಆರ್. ಗೂ ಮುಂಚೆ ಒಟ್ಟು 2,39,883 ಮತದಾರರಿದ್ದು, ಎಸ್.ಐ.ಆರ್. ನಂತರ ಅಚಿತಿವಾಗಿ 2,03,686 ಜನ ಅಂತಿಮ ಮತದಾರರ ಪಟ್ಟಿಯಲ್ಲಿ ಉಳಿದಿರುತ್ತಾರೆ ಎಂದರು.

ಅಂತಿಮ ಮತದಾರರ ಪಟ್ಟಿಯಲ್ಲಿ ಪುರುಷ ಮತದಾರರು 1,00,855 ಹಾಗೂ ಮಹಿಳಾ ಮತದಾರರು 1,02,810 ಇದ್ದು, ಇತರೆ ಮತದಾರರು 21 ಜನ ಇದ್ದಾರೆ. ಶೇಕಡಾವಾರು ಲೆಕ್ಕಚಾರದಲ್ಲಿ ಶೇ. 49.51 ಪುರುಷ ಮತದಾರರು, ಶೇ.50.47 ಮಹಿಳಾ ಮತದಾರರು ಹಾಗೂ ಶೇ.0.01 ರಷ್ಟು ಇತರೆ ಮತದಾರರು ಇರುತ್ತಾರೆ ಎಂದರು.

ಎಸ್.ಐ.ಆರ್. ನಂತರ ಆಬ್ಸೆಂಟ್, ಶಿಫ್ಟ್, ಮತ್ತು ಡೆತ್ ಮುಂತಾದವುಗಳನ್ನು ಪರಿಶೀಲಿಸಿ ಸಮಗ್ರವಾಗಿ ಡಬಲ್ ಎಂಟ್ರಿಗಳನ್ನು ತೆಗೆದು ಹಾಕಿದ ನಂತರ, ಅಂತಿಮವಾಗಿ ಒಟ್ಟು 36,197 ಜನ ಮತದಾರರು ಅನರ್ಹರಾಗಿದ್ದು, ಇವರನ್ನು ಆಬ್ಸೆಂಟ್, ಶಿಫ್ಟ್ ಮತ್ತು ಡೆತ್ ಕಾರಣಗಳಿಂದ ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ.

ರಾಯಚೂರು ನಗರ ಮತಕ್ಷೇತ್ರ ಕ್ಷೇತ್ರ ಸಂಖ್ಯೆ 54ರಲ್ಲಿ ಒಟ್ಟು 250 ಮತಗಟ್ಟೆಗಳಿದ್ದು, ಎಸ್.ಐ.ಆರ್. ನಂತರ 4 ಮತಗಟ್ಟೆಗಳು ಹೆಚ್ಚಾಗಿ ಒಟ್ಟು 254 ಮತಗಟ್ಟೆಗಳಾಗಿರುತ್ತವೆ. ಎಸ್.ಐ.ಆರ್‌ಗೂ ಮುಂಚೆ 2,54,403 ಜನ ಮತದಾರರಿದ್ದು, ಎಸ್.ಐ.ಆರ್. ನಂತರ ಆಬ್ಸೆಂಟ್, ಶಿಫ್ಟ್ ಮತ್ತು ಡೆತ್ ವಿವರಗಳನ್ನು ಪರಿಶೀಲಿಸಿ ತೆಗೆದ ನಂತರ ಒಟ್ಟು 1,84,678 ಮತದಾರರು ಅಂತಿಮ ಮತದಾರರ ಪಟ್ಟಿಯಲ್ಲಿ ಹೆಸರಿರುತ್ತಾರೆ. ಈ ಪಟ್ಟಿಯಲ್ಲಿ ಪುರುಷ ಮತದಾರರು 89,971, ಮಹಿಳಾ ಮತದಾರರು 94,660 ಹಾಗೂ ಇತರೆ ಮತದಾರರು 47 ಜನ

3ನೇಯ ಪುಟಕ್ಕೆ

ರಾಯಚೂರು 10 ತಿಂಗಳ ಬಾಕಿ ವೇತನ ಪಾವತಿಗೆ ಆಗ್ರಹಿಸಿ ತುಂಗಭದ್ರಾ ನೀರಾವರಿ ಇಲಾಖೆ ಕಾರ್ಮಿಕರ ಧರಣಿ

ರಾಯಚೂರು,ಆ.28

ತುಂಗಭದ್ರಾ ನೀರಾವರಿ ಇಲಾಖೆಯ ಮಾನ್ವಿ ಉಪವಿಭಾಗದ ಕಾರ್ಮಿಕರಿಗೆ ಕಳೆದ 10 ತಿಂಗಳಿನಿಂದ ಬಾಕಿ ಉಳಿದಿರುವ ವೇತನವನ್ನು ತಕ್ಷಣ ಪಾವತಿಸಬೇಕು ಎಂದು ಆಗ್ರಹಿಸಿ, ಕಾರ್ಮಿಕರು ಮಂಗಳವಾರ ಮಾನ್ವಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ ಎದುರು ಧರಣಿ ನಡೆಸಿದರು.

ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ಸಿರವಾರ ವಿಭಾಗದ ಅಧ್ಯಕ್ಷ ರಾಜಾಸಾಬ್ ಮಲ್ಲಟ ಅವರ ನೇತೃತ್ವದಲ್ಲಿ ನಡೆದ ಧರಣೆಯಲ್ಲಿ, ಕಾರ್ಮಿಕರಿಗೆ ಬಾಕಿ ವೇತನ ಪಾವತಿಸದಿರುವುದರಿಂದ ಅವರ ಕುಟುಂಬಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕರು ಕಳೆದ 25-30 ವರ್ಷಗಳಿಂದ ನೀರಾವರಿ ಕಾಲುವೆಗಳ ನಿರ್ವಹಣೆ ಸೇರಿದಂತೆ ವಿವಿಧ ಕೆಲಸಗಳನ್ನು ನಿರ್ವಹಿಸುತ್ತಿದ್ದರೂ, ಕಳೆದ 10 ತಿಂಗಳಿನಿಂದ ವೇತನವಿಲ್ಲದೆ ಜೀವನ ನಡೆಸುವುದು ದುಸ್ತರವಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸದಿರುವುದರಿಂದ ವೇತನ ಪಾವತಿಯಲ್ಲಿ ವಿಳಂಬವಾಗಿದ್ದು, ಕಾರ್ಮಿಕರು ಮತ್ತು ಅವರ ಕುಟುಂಬಗಳು ಸಂಕಷ್ಟ ಎದುರಿಸುವಂತಾಗಿದೆ ಎಂದು ಪ್ರತಿಭಟನಾಕಾರರು ದೂರಿದರು. ಸಮಯಕ್ಕೆ ಸರಿಯಾಗಿ ಟೆಂಡರ್ ಮಾಡದೆ ಇರುವುದರಿಂದ ಕಾರ್ಮಿಕರಿಗೆ 10 ತಿಂಗಳ ಬಾಕಿ ವೇತನ ಉಳಿದಿದೆ.

ಕಾರ್ಮಿಕರು ನಿರ್ವಹಿಸಿದ ಕೆಲಸಕ್ಕೆ ಪ್ರತಿಯಾಗಿ ದೊರೆಯಬೇಕಾದ ವೇತನವನ್ನು ಅನಿರ್ದಿಷ್ಟವಾಗಿ ತಡೆಹಿಡಿಯುವುದು ಸರಿಯಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾರ್ಮಿಕರ 10 ತಿಂಗಳ ಬಾಕಿ ವೇತನವನ್ನು ತಕ್ಷಣ ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.


ಧರಣಿಯ ಸಂದರ್ಭದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ ವಿದ್ಯಾಸಾಗರ್ ಹಾಗೂ ಸೆಕ್ಷನ್ ಅಧಿಕಾರಿಗಳು ಪ್ರತಿಭಟನಾಕಾರರೊಂದಿಗೆ ಚರ್ಚಿಸಿ,

3ನೇಯ ಪುಟಕ್ಕೆ

20-30 ವರ್ಷಗಳಿಂದ ನೀರು, ರಸ್ತೆ, ಬೀದಿದೀಪಗಳ ಸಮಸ್ಯೆ: ನಿವಾಸಿಗಳ ಅಳಲು ಆಲಿಸಿದ -ರಾಮನಗೌಡ ಏಗನೂರು

ರಾಯಚೂರು:

ನಗರದ ಮಹಾನಗರ ಪಾಲಿಕೆಯ 33ನೇ ವಾರ್ಡ್‌ನ ಯರಮರಸ್ ಕ್ಯಾಂಪ್‌ನ ಹೌಸಿಂಗ್ ಬೋರ್ಡ್ ಕಾಲನಿಯಲ್ಲಿ ಕುಡಿಯುವ ನೀರು, ರಸ್ತೆ ಹಾಗೂ ಬೀದಿದೀಪಗಳಂತಹ ಮೂಲಭೂತ ಸೌಲಭ್ಯಗಳ ಕೊರತೆಯಿಂದ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ 20ರಿಂದ 30 ವರ್ಷಗಳಿಂದ ಸಮಸ್ಯೆಗಳು ಮುಂದುವರಿದಿದ್ದರೂ ಪರಿಹಾರ ದೊರೆತಿಲ್ಲ ಎಂಬ ನಿವಾಸಿಗಳ ಅಳಲಿಗೆ ಸ್ಪಂದಿಸಿದ ಜೆಡಿಎಸ್ ಮುಖಂಡ ರಾಮನಗೌಡ ಏಗನೂರು ಅವರು ಕಾಲನಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿದರು.



ಕಾಲನಿಯ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸಿದ ಅವರು, ಜನರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕುಡಿಯುವ ನೀರಿಗಾಗಿ ಪರದಾಟ

ಕಾಲನಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಕೆಲವು ಮನೆಗಳಲ್ಲಿ ಐದರಿಂದ ಆರು ಅಡಿ ಆಳದವರೆಗೆ ನೀರಿಗಾಗಿ ಪ್ರಯತ್ನಿಸಿದರೂ ನೀರು ದೊರೆಯುತ್ತಿಲ್ಲ ಎಂದು ನಿವಾಸಿಗಳು ಅಳಲು ತೋಡಿಕೊಂಡರು. ಈ ಕುರಿತು ಹಲವು ಬಾರಿ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೂ ಸಮಸ್ಯೆ ಬಗೆಹರಿದಿಲ್ಲ ಎಂದು ದೂರಿದರು.

ಹದಗೆಟ್ಟ ರಸ್ತೆಗಳು; ಅಪಘಾತದ ಭೀತಿ

ಕಾಲನಿಯ ರಸ್ತೆಗಳು ಹದಗೆಟ್ಟಿದ್ದು, ಅನೇಕ ಕಡೆಗಳಲ್ಲಿ ಕಲ್ಲುಗಳು ಹಾಗೂ ಜಲ್ಲಿಕಲ್ಲುಗಳು ಹರಡಿಕೊಂಡಿವೆ. ಇದರಿಂದ ವಾಹನ ಸವಾರರು, ಶಾಲಾ ಮಕ್ಕಳು ಹಾಗೂ ವೃದ್ಧರು ಸಂಚರಿಸಲು ತೊಂದರೆಯಾಗುತ್ತಿದೆ. ಇತ್ತೀಚೆಗೆ ರಸ್ತೆ ಮೇಲೆ ನಡೆದುಕೊಂಡು ಹೋಗುವಾಗ ವೃದ್ಧೆಯೊಬ್ಬರು ಬಿದ್ದು ಕಾಲು ಮುರಿದುಕೊಂಡಿದ್ದಾರೆ ಎಂದು ಸ್ಥಳೀಯರು ತಿಳಿಸಿದರು.

ಕಾಲನಿಯಲ್ಲಿ ಸಮರ್ಪಕ ಸಿಸಿ ರಸ್ತೆ ನಿರ್ಮಿಸಿಲ್ಲ. ಹೀಗಾಗಿ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ನಿವಾಸಿಗಳು ಆಗ್ರಹಿಸಿದರು.

ಬೀದಿದೀಪಗಳಿಲ್ಲದೆ ಕತ್ತಲಲ್ಲಿ ಸಂಚಾರ

3ನೇಯ ಪುಟಕ್ಕೆ

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ

ನ.16ರಂದು ಪತ್ರಕರ್ತರ ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ

ರಾಯಚೂರು: ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಹಾಗೂ ರಾಯಚೂರು ರಿಪೋರ್ಟರ್ಸ್ ಗಿಲ್ಡ್‌ನ ಬೆಳ್ಳಿ ಮಹೋತ್ಸವದ ಅಂಗವಾಗಿ ನವೆಂಬರ್ 16 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಪತ್ರಿಕಾ ಭವನದಲ್ಲಿ ಪತ್ರಕರ್ತರಿಗಾಗಿ ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ ನಡೆಯಲಿದೆ.

ಕನ್ನಡ ಚಲನಚಿತ್ರ ಗೀತೆ, ಭಾವಗೀತೆ, ಹಿಂದಿ ಚಲನಚಿತ್ರ ಗೀತೆ, ಭಾವಗೀತೆ ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಆಸಕ್ತ ಪತ್ರಕರ್ತರು ನವೆಂಬರ್ 10ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ವಿಜೇತರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು.

ಆಸಕ್ತರು ಗಿಲ್ಡ್ ಬೆಳ್ಳಿ ಮಹೋತ್ಸವ ಸಾಂಸ್ಕೃತಿಕ ಸಮಿತಿಯ ಪ್ರಮುಖರಾದ ಚಂದ್ರಕಾಂತ ಮಸಾನಿ, (99726 69369), ಸತ್ಯನಾರಾಯಣ (99868 59891), ಖಾನಸಾಬ್ ಮೋಮಿನ್ (7022265311) ಅಥವಾ ಚನ್ನಬಸವ ಬಾಗಲವಾಡ (99452 08017) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ಗಾಯನ ಸ್ಪರ್ಧೆಯಲ್ಲಿ ಜಿಲ್ಲೆಯ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತಿಮ ಮತದಾರರ ಪಟ್ಟಿ ಪ್ರಕಟ ಕಲಬುರಗಿ ಜಿಲ್ಲೆಯಲ್ಲಿ 18,94,144 ಮತದಾರರು :ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ

ಕಲಬುರಗಿ:

ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ. ಒಂಬತ್ತು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಈ ಪಟ್ಟಿಯ ಪ್ರಕಾರ, ಜಿಲ್ಲೆಯಲ್ಲಿ ಒಟ್ಟು 18,94,144 ಮತದಾರರಿದ್ದಾರೆ. ಇವರಲ್ಲಿ 9,61,210 ಪುರುಷರು, 9,32,722 ಮಹಿಳೆಯರು ಹಾಗೂ 212 ಇತರ ಲಿಂಗದ ಮತದಾರರು ಸೇರಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ತಿಳಿಸಿದರು.



ಮಂಗಳವಾರ ನಗರದ ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದ ಮೀಡಿಯಾ ಸೆಂಟರ್‌ನಲ್ಲಿ ಎಸ್‌ಐಆರ್ ಕುರಿತು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯ ವಿವರಗಳನ್ನು ನೀಡಿದರು.

ಮನೆಮನೆ ಸಮೀಕ್ಷೆ, ಎನ್ಯುಮರೇಷನ್ ಹಾಗೂ ಮ್ಯಾಪಿಂಗ್ ಕಾರ್ಯಗಳು ಪೂರ್ಣಗೊಂಡ ಬಳಿಕ ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕರಡು ಪಟ್ಟಿಯಲ್ಲಿ 18,49,575 ಮತದಾರರಿದ್ದರು. ನಂತರ ಹಕ್ಕು ಮತ್ತು ಆಕ್ಷೇಪಣೆಗಳ ಅವಧಿಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಒಟ್ಟು 44,559 ಹೊಸ ಮತದಾರರನ್ನು ಅಂತಿಮ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ ಎಂದು ಹೇಳಿದರು.

ಎಸ್‌ಐಆರ್ ಅವಧಿಯಲ್ಲಿ ಕಂಡುಬಂದ ಅಸಂಗತತೆಗಳು (ಅನಾಮಲಿ) ಹಾಗೂ ಮ್ಯಾಪಿಂಗ್ ಆಗದ ಪ್ರಕರಣಗಳಿಗೆ ಸಂಬಂಧಿಸಿದಂತೆ 1,05,511 ನೋಟಿಸ್‌ಗಳನ್ನು ಜಾರಿಗೊಳಿಸಿ ಪರಿಶೀಲನೆ ನಡೆಸಲಾಗಿತ್ತು. ಸೂಕ್ತ ದಾಖಲೆಗಳಿಲ್ಲದ, ಮೃತಪಟ್ಟ ಹಾಗೂ ಬೇರೆಡೆಗೆ ಸ್ಥಳಾಂತರಗೊಂಡ ಅಥವಾ ನಕಲಿ ನೋಂದಣಿಗೆ ಸಂಬಂಧಿಸಿದಂತೆ 1,905 ಮತದಾರರ ಹೆಸರುಗಳನ್ನು ಮಾತ್ರ ಅಂತಿಮ ಪಟ್ಟಿಯಿಂದ ಕೈಬಿಡಲಾಗಿದೆ. ಅರ್ಹ ಮತದಾರರಿಗೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಪ್ರಸ್ತುತ ಅಂತಿಮ ಪಟ್ಟಿಯಲ್ಲಿ 18ರಿಂದ 19 ವರ್ಷದೊಳಗಿನ 28,966 ಯುವ ಮತದಾರರಿದ್ದಾರೆ. ಇದರೊಂದಿಗೆ 25,501 ಅಂಗವಿಕಲ (ಪಿಡಬ್ಲ್ಯುಡಿ) ಮತದಾರರು, 85 ವರ್ಷಕ್ಕಿಂತ ಮೇಲ್ಪಟ್ಟ 14,897 ಹಿರಿಯ ಮತದಾರರು ಹಾಗೂ 896 ಸೇವಾನಿರತ ಯೋಧರು ಇದ್ದಾರೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಮತಗಟ್ಟೆಗಳ ಸಂಖ್ಯೆಯನ್ನೂ ತರ್ಕಬದ್ಧಗೊಳಿ ಸಲಾಗಿದೆ. 1,200 ಕ್ಕಿಂತ ಹೆಚ್ಚು ಮತದಾರರಿರುವ ಪ್ರದೇಶಗಳಲ್ಲಿ ಹೊಸ ಮತಗಟ್ಟೆಗಳನ್ನು ಸೃಷ್ಟಿಸಲಾ ಗಿದೆ. ಇದರಿಂದ ಎಸ್‌ಐಆರ್‌ಗೂ ಮುನ್ನ ಇದ್ದ 2,400 ಮತಗಟ್ಟೆಗಳಿಗೆ ಹೆಚ್ಚುವರಿಯಾಗಿ 61 ಮತಗಟ್ಟೆಗಳು ಸೇರ್ಪಡೆಯಾಗಿದ್ದು, ಒಟ್ಟು ಸಂಖ್ಯೆ 2,461ಕ್ಕೆ ಏರಿಕೆಯಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ ಇಪಿ ರೇಶಿಯೋ ಶೇ. 65.44ರಷ್ಟಿದ್ದು, ಲಿಂಗಾನುಪಾತವು ಪ್ರತಿ ಸಾವಿರ ಪುರುಷರಿಗೆ 971 ಮಹಿಳೆಯರಷ್ಟಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಸಿಂಧೆ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅಧಿಕಾರಿಗಳು ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಿದ್ದಾರೆ. ಗೈರುಹಾಜರಾದವರು, ಸ್ಥಳಾಂತರಗೊಂಡವರು, ಮೃತಪಟ್ಟವರು ಹಾಗೂ ಈಗಾಗಲೇ ನೋಂದಾಯಿಸಿಕೊಂಡವರು ಎಂಬ ನಾಲ್ಕು ವಿಭಾಗಗಳ ಅಡಿಯಲ್ಲಿ ಹೆಸರುಗಳನ್ನು ಕೈಬಿಡಲಾಗಿದೆ. ಕೆಲವು ಕಡೆ ಹೆಸರುಗಳನ್ನು ತೆಗೆದುಹಾಕಿರುವ ಬಗ್ಗೆ ದೂರುಗಳು ಬಂದಿದ್ದರೂ, ನಿಯಮಾನುಸಾರ ಕರಡು ಪಟ್ಟಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ 324 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಒಟ್ಟಾರೆಯಾಗಿ ಪರಿಷ್ಕರಣೆ ವೇಳೆ 48,513 ಮತದಾರರನ್ನು ಸೇರ್ಪಡೆಗೊಳಿಸಲಾಗಿದ್ದು, 3,954 ಹೆಸರುಗಳನ್ನು ಕೈಬಿಡಲಾಗಿದೆ ಹಾಗೂ 42,108 ತಿದ್ದುಪಡಿಗಳನ್ನು ಮಾಡಲಾಗಿದೆ. ಯಾವುದೇ ಗೊಂದಲ ಗಳಿಗೆ ಅವಕಾಶ ನೀಡದೆ, ನಿಖರ ದಾಖಲೆಗಳ ಆಧಾರದಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದರು.




ಔರಾದ್ ಪಕ್ಷಕ್ಕಾಗಿ ದುಡಿದವರಿಗೆ ಜಿಪಂ, ತಾಪಂ ಟಿಕೆಟ್ : ಜ್ಯೋತಿ ಮರಗೂಳ್

ಔರಾದ್

ಪ್ರತಿಯೊಬ್ಬ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಪಕ್ಷವನ್ನು ಬಲಪಡಿಸಲು ಸಾಧ್ಯ. ಪಕ್ಷಕ್ಕಾಗಿ ದುಡಿದವರಿಗೆ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಟಿಕೆಟ್ ನೀಡಲಾಗುವುದು ಎಂದು ಕೆಪಿಸಿಸಿ ವೀಕ್ಷಕಿ ಜ್ಯೋತಿ ಮರಗೂಳ್ ಹೇಳಿದರು. ಪಟ್ಟಣದ ಸಾಯಿ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷ ಸಂಘಟನೆ ಸೃಜನ ಅಭಿಯಾನ-2 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕೆಪಿಸಿಸಿ ವೀಕ್ಷಕ ಹಸನಸಾಬ್ ಧೋಟಿಹಾಳ್ ಮಾತನಾಡಿ, ಕಳೆದ ಒಂಬತ್ತು ವರ್ಷಗಳಿಂದ ರಾಜಕುಮಾರ್ ಹಲಬುರ್ಗೆ ಅವರು ತಾಲೂಕು ಅಧ್ಯಕ್ಷರಾಗಿ ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ. ಅಲ್ಲದೆ, ಎಲ್ಲ ಸಮುದಾಯಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದ್ದಾರೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಬ್ದುಲ್ ಮನ್ನಾನ್ ಸೇಠ್ ಮಾತನಾಡಿ, ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಮೂಲಕ ಜನಸಾಮಾನ್ಯರಿಗೆ ನೆರವಾಗಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ 30ಕ್ಕೂ ಹೆಚ್ಚು ಆಕಾಂಕ್ಷಿಗಳು ಅಧ್ಯಕ್ಷ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷ ರಾಜಕುಮಾರ್ ಹಲಬುರ್ಗೆ, ಹಿರಿಯ ಮುಖಂಡ ಡಾ. ಭೀಮಸೇನರಾವ್ ಶಿಂಧೆ, ರಾಜಶ್ರೀ ಸ್ವಾಮಿ, ಸಂಜಯ್ ಜಾಗಿರದಾರ್ ಸುಧಾಕರ್ ಕೊಳ್ಳುರ್ ಅನೀಲ್ ಹಡೆ, ಚನ್ನಪ್ಪ ಉಪ್ಪೆ, ಶರಣಪ್ಪ ಪಾಟೀಲ್, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



ಅಫಜಲಪುರದಲ್ಲಿ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭ

ಅಫಜಲಪುರ:

ಸ್ವಾಭಿಮಾನಿ ಕಬ್ಬು ಬೆಳೆಗಾರರ ಹೋರಾಟ ಸಮಿತಿ ಹಾಗೂ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಕಬ್ಬು ಬೆಳೆಗಾರರ ವಿವಿಧ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಫಜಲಪುರ ತಾಲೂಕಿನಲ್ಲಿ ಬುಧವಾರ ಹಗಲು-ರಾತ್ರಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ಚಾಲನೆ ನೀಡಲಾಯಿತು.

ಗುರು ಚಾಂದಕವಟೆ ಮಾತನಾಡಿ, 8.5 ರಿಕವರಿ ಆಧಾರದ ಮೇಲೆ ಕಬ್ಬಿನ ಬೆಲೆ ನಿಗದಿಪಡಿಸಬೇಕು, ಎಫ್‌ಆರ್‌ಪಿ () ದರವನ್ನು 5,500 ರೂ.ಗೆ ಹೆಚ್ಚಿಸಬೇಕು ಹಾಗೂ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು.

ರಮೇಶ ಪಾಟೀಲ ಮಾತನಾಡಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅನೇಕ ರೈತರ ಕಬ್ಬಿನ ಬೆಳೆ ಸುಟ್ಟುಹೋಗುತ್ತಿರುವುದು ಹಾಗೂ ಕಬ್ಬು ಒಣಗುತ್ತಿರುವುದರಿಂದ ಕಾರ್ಖಾನೆಗಳನ್ನು ವಿಳಂಬ ಮಾಡದೆ ನವೆಂಬರ್ 1ರಿಂದಲೇ ಆರಂಭಿಸಬೇಕು ಎಂದು ಆಗ್ರಹಿಸಿದರು.

ಲತೀಫ್ ಪಟೇಲ ಮಾತನಾಡಿ ಬೆಂಕಿಗೆ ಆಹುತಿಯಾದ ಕಬ್ಬಿನ ಬೆಳೆಗಳಿಗೆ ಅನಗತ್ಯ ಷರತ್ತುಗಳನ್ನು ವಿಧಿಸದೆ ರೈತರಿಗೆ ತ್ವರಿತವಾಗಿ ಸೂಕ್ತ ಪರಿಹಾರ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದರು.

ಧರಣಿ ಸತ್ಯಾಗ್ರಹದಲ್ಲಿ ರಮೇಶ್ ಶೆಟ್ಟಿ, ಶಾಂತು ಅಂಜುಟಗಿ, ಭೀಮರಾಯ ಗೌರ, ಅಣ್ಣಾರಾಯ ಪಾಟೀಲ್, ಶರಣಗೌಡ ಪಾಟೀಲ್, ಸಿದ್ದು ದೇವರನಾವದಗಿ, ಬಸು ಮಂಗಳೂರು, ಬಸವರಾಜ ಪಾಟೀಲ್, ಅವಣ್ಣ ಪೂಜಾರಿ, ಅವಧೂತ ಚಂದು ಬನ್ನೆಟಿ, ತುಕಾರಾಮ ಸಿಂದೆ, ನಾಮದೇವ ಕಡಕೋಳ, ಸಂಗಣ್ಣ ವಾಲಿ ಸೇರಿದಂತೆ ಅನೇಕ ರೈತ ಮುಖಂಡರು ಹಾಗೂ ಕಬ್ಬು ಬೆಳೆಗಾರರು ಭಾಗವಹಿಸಿದ್ದರು.

ಹುಮನಾಬಾದ್ ಬರ ಪರಿಹಾರ, ಬಾಕಿ ಕೂಲಿ ಪಾವತಿಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ

ಹುಮನಾಬಾದ್:

ತಾಲ್ಲೂಕಿನಲ್ಲಿ ಮಳೆಯ ಕೊರತೆಯಿಂದ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದ್ದು, ರೈತರ ಹೊಲಗಳಲ್ಲಿ ಕೆಲಸವಿಲ್ಲದೆ ಕೂಲಿ ಕಾರ್ಮಿಕರು ಹೊರರಾಜ್ಯಗಳಿಗೆ ಗುಳೆ ಹೋಗುವ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ನಗರದ ಅಂಬೇಡ್ಕರ್ ವೃತ್ತದಿಂದ ಹಲಗೆ ಬಾರಿಸುತ್ತಾ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಮಿಕರು ತಹಶೀಲ್ದಾರ್ ಕಚೇರಿಗೆ ತೆರಳಿ, ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದರು.

ವಿಬಿ-ಜಿ ರಾಮ್ ಜಿ ಯೋಜನೆಯ ಖಜಾನೆ-2 (ಕೆ-2) ಪದ್ಧತಿಯಡಿ ಇದುವರೆಗೆ ಶೇ.70ರಷ್ಟು ಕೂಲಿ ಕಾರ್ಮಿಕರಿಗೆ ಕೂಲಿ ಹಣ ಪಾವತಿಯಾಗಿಲ್ಲ. ಪ್ರತಿ ಹಳ್ಳಿಯಲ್ಲೂ ಕುಡಿಯುವ ನೀರಿನ ಹಾಹಾಕಾರ ಎದುರಾಗಿದ್ದು, ದನಕರುಗಳಿಗೆ ಮೇವು ಮತ್ತು ನೀರಿನ ಸಮಸ್ಯೆ ಉಂಟಾಗಿದೆ. ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಿ ನಾಲ್ಕು ತಿಂಗಳು ಕಳೆದಿದ್ದರೂ ಪರಿಹಾರ ದೊರೆತಿಲ್ಲ ಎಂದು ಮನವಿಯಲ್ಲಿ ದೂರಲಾಗಿದೆ.

ವಿಬಿ-ಜಿ ರಾಮ್ ಜಿ ಯೋಜನೆಯ ಕೆ-2 ಪದ್ಧತಿಯನ್ನು ರದ್ದುಗೊಳಿಸಬೇಕು. ಬರಗಾಲದ ಹಿನ್ನೆಲೆಯಲ್ಲಿ ಕೂಲಿ ಕಾರ್ಮಿಕರಿಗೆ 200 ದಿನಗಳ ಕೆಲಸ ಒದಗಿಸಬೇಕು. ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಕೆರೆಯನ್ನು ಅಭಿವೃದ್ಧಿಪಡಿಸಬೇಕು ಅಥವಾ ಹೊಸ ಕೆರೆ ನಿರ್ಮಿಸಬೇಕು. ಜುಲೈ 1ರಿಂದ ಬಾಕಿ ಉಳಿದಿರುವ ವಿಬಿ-ಜಿ ರಾಮ್ ಜಿ ಯೋಜನೆಯ ಕೂಲಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ರೈತರಿಗೆ ಬರಗಾಲದ ಪರಿಹಾರವನ್ನು ತಕ್ಷಣ ಒದಗಿಸಬೇಕು ಎಂದು ಆಗ್ರಹಿಸಲಾಗಿದೆ. ಏಳು ತಿಂಗಳಿಂದ ಸ್ಥಗಿತಗೊಂಡಿರುವ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಅಂಗವಿಕಲರ ಹಾಗೂ ವಿಧವಾ ವೇತನವನ್ನು ಕೂಡಲೇ ಮರುಜಾರಿಗೊಳಿಸಬೇಕು. ಮನರೇಗಾ ಯೋಜನೆಯ ಹಳೆಯ ಬಾಕಿ ಕೂಲಿ ಹಣವನ್ನು ಪಾವತಿಸಬೇಕು. ಕಾಯಕ ಬಂಧುಗಳಿಗೆ ಕೂಲಿ ಕಾರ್ಮಿಕರ ಹಾಜರಾತಿಯ ಆಧಾರದ ಮೇಲೆ ದಿನಕ್ಕೆ ಹೆಚ್ಚುವರಿಯಾಗಿ ನಾಲ್ಕು ರೂ. ಪಾವತಿಸಬೇಕು ಎಂದು ಒತ್ತಾಯಿಸಲಾಗಿದೆ.

ಪಡಿತರ ಚೀಟಿಯ ಇ-ಕೆವೈಸಿ ಮಾಡಿಸಲು ನೀಡಿರುವ ಗಡುವನ್ನು ಒಂದು ತಿಂಗಳು ವಿಸ್ತರಿಸಬೇಕು. ಆಧಾರ್ ಕಾರ್ಡ್ ಸೇವಾ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಗ್ರಾಮಗಳಲ್ಲಿ ದನಕರುಗಳ ಕುಡಿಯುವ ನೀರಿಗಾಗಿ ತೊಟ್ಟಿಗಳನ್ನು ನಿರ್ಮಿಸಬೇಕು ಹಾಗೂ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮೇವಿನ ಕೇಂದ್ರ ತೆರೆಯಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಪ್ರತಿಭಟನೆಯಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಸೈಯದ್ ಇಸಾಮೊದ್ದೀನ್, ತಾಲ್ಲೂಕಾಧ್ಯಕ್ಷ ದೇವಾನಂದ್ ಬಿ. ಗಾಯಕವಾಡ್, ಕಾರ್ಯದರ್ಶಿ ಸಿದ್ರಾಮ್ ಎಂ. ಡಾಂಗೆ, ಉಪಾಧ್ಯಕ್ಷ ಕಂಟೆಪ್ಪ ಪೂಜಾರಿ, ಸಹ ಕಾರ್ಯದರ್ಶಿ ಸೂರ್ಯಕಾಂತ್ ಸಂತೋಷಕರ್ ಜಿಲ್ಲಾ ಕಾರ್ಯದರ್ಶಿ ಅಂಬುಬಾಯಿ ಮಾಳಗೆ, ಹುಸೇನ್ ಕನಕಟ್ಟಾ ಹಾಗೂ ಅಮರ್ ಹುಣಸಗೇರಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಾಗಾವಿಯ ಐತಿಹಾಸಿಕ, ಸಾಂಸ್ಕೃತಿಕ ಮಹತ್ವ ದಾಖಲಿಸುವ ಅಗತ್ಯವಿದೆ: ಮಲ್ಲಿಕಾರ್ಜುನ ಬಾಗೋಡಿ



ಚಿತ್ತಾಪುರ:

ಕರ್ನಾಟಕದ ಪ್ರಾಚೀನ ಅಗ್ರಹಾರಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ನಾಗಾವಿಯ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪುರಾತತ್ತ್ವೀಯ ಮಹತ್ವವನ್ನು ಸಮಗ್ರವಾಗಿ ದಾಖಲಿಸುವ ಅಗತ್ಯವಿದೆ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗದ ಉಪನ್ಯಾಸಕ ಮಲ್ಲಿಕಾರ್ಜುನ ಸಿ. ಬಾಗೋಡಿ ಹೇಳಿದರು.

ಚಿತ್ತಾಪುರದ ಆರ್.ಕೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಆಯೋಜಿಸಿದ್ದ ನಾಗಾವಿ: ಸಾಂಸ್ಕೃತಿಕ ಮುಖಾಮುಖಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಗಾವಿಯ ಪ್ರಾಚೀನತೆ ಹಾಗೂ ವೈಭವವನ್ನು ಶಾಸನಗಳು ಸ್ಪಷ್ಟವಾಗಿ ದಾಖಲಿಸಿವೆ ಎಂದು ತಿಳಿಸಿದರು.

ನಾಗಾವಿಯನ್ನು ಶಾಸನಗಳಲ್ಲಿ ಅಗ್ರಹಾರ ನಾಗವಾವಿ, ಮಹಾಅಗ್ರಹಾರ ನಾಗವಾವಿ ಹಾಗೂ ಸರ್ವನಮಸ್ಯದ ಅಗ್ರಹಾರ ನಾಗವಾವಿ ಎಂಬ ವಿವಿಧ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಒಂದು ಶಾಸನದಲ್ಲಿ ನಾಗಾವಿಯನ್ನು ''ಚತುರ್ವೇದ ಪಾರಾವಾರ ಪಾರಗರಪ್ಪ ನಾಲ್ನೂರು ವಿಪ್ರೋತ್ತಮರಿಂದ ಅಭಿನವ ಬ್ರಹ್ಮಲೋಕವೆಂಬಂತೆ'' ಎಂದು ವರ್ಣಿಸಿರುವುದು ಅದರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ ಎಂದು ಬಾಗೋಡಿ ಹೇಳಿದರು.

ರಾಷ್ಟ್ರಕೂಟರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿದ್ದ ನಾಗಾವಿ, ಚಾಲುಕ್ಯರಸ ಮೊದಲನೇ ಸೋಮೇಶ್ವರನ ಕಾಲದಲ್ಲಿ ಘಟಿಕಾಸ್ಥಾನವಾಗಿ ಬೆಳೆದಿತ್ತು. ಮಧುವಪ್ಪರಸ ದಂಡನಾಯಕ ಇದನ್ನು ನಿರ್ಮಿಸಿದ್ದನೆಂದು ತಿಳಿಸಿದ ಬಾಗೋಡಿ, ಸ್ಥಳೀಯ ವಿಶ್ವವಿದ್ಯಾಲಯದ ಮಟ್ಟದ ವಿದ್ಯಾಕೇಂದ್ರವಾಗಿದ್ದ ನಾಗಾವಿಯ ಘಟಿಕಾಸ್ಥಾನವು ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಹೊಂದಿದೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪತ್ರಾಗಾರ ಮತ್ತು ಗ್ಯಾಸೆಟಿಯರ್ ಇಲಾಖೆಯ ಉಪನಿರ್ದೇಶಕ ಡಾ. ವೀರಶೆಟ್ಟಿ ಗಾರಂಪಳ್ಳಿ, ನಾಗಾವಿ ಘಟಿಕಾಸ್ಥಾನದಲ್ಲಿ ವೇದ, ಶಾಸ್ತ್ರ, ಯೋಗ ಸೇರಿದಂತೆ ಪ್ರಾಚೀನ ಭಾರತದ ಪ್ರಮುಖ ವಿದ್ಯಾಶಾಖೆಗಳನ್ನು ಬೋಧಿಸಲಾಗುತ್ತಿತ್ತು ಎಂದು ಹೇಳಿದರು.

ಇಲ್ಲಿ ಬೋಧಿಸುತ್ತಿದ್ದ ಉಪಾಧ್ಯಾಯರು ಹಾಗೂ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿತ್ತು ಎಂಬುದನ್ನು ಶಾಸನಗಳು ದಾಖಲಿಸಿವೆ. ನಾಗಾವಿಯ ಫಲವತ್ತಾದ ಭೂಮಿ ಹಾಗೂ ಸಮೃದ್ಧ ನೈಸರ್ಗಿಕ ಸಂಪತ್ತು ಕೂಡ ಅದರ ಬೆಳವಣಿಗೆಗೆ ಪೂರಕವಾಗಿದ್ದವು ಎಂದು ಅವರು ವಿವರಿಸಿದರು.

ನಾಗಾವಿಯ ಲಕ್ಷ್ಮೇಶ್ವರ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ. 1092ರ ಗದ್ಯಶಾಸನವು ಇಲ್ಲಿನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನದ ಕುರಿತು ಮಹತ್ವದ ಮಾಹಿತಿ ನೀಡುತ್ತದೆ. ನಾಗಾವಿ ಸಂತೆಯಲ್ಲಿ ಮಾರಾಟವಾಗುತ್ತಿದ್ದ ವಸ್ತುಗಳ ಬೆಲೆಯ ಹದಿನಾರನೇ ಒಂದು ಭಾಗವನ್ನು ದೇವಾಲಯಗಳ ಜೀರ್ಣೋದ್ಧಾರಕ್ಕೆ ನೀಡಲು ವರ್ತಕರು ನಿರ್ಧರಿಸಿದ್ದರು. ಈ ಆದಾಯ-ವೆಚ್ಚದ ಉಸ್ತುವಾರಿ ನೋಡಿಕೊಳ್ಳಲು ಸಂಭಾವಿತರಪ್ಪ ಶೆಟ್ಟಿಯವರ ನೇತೃತ್ವದಲ್ಲಿ ಧರ್ಮದರ್ಶಿ ಸಮಿತಿಯನ್ನು ರಚಿಸಲಾಗಿತ್ತು ಎಂಬುದನ್ನು ಶಾಸನ ತಿಳಿಸುತ್ತದೆ. ನಾಗಾವಿ ಪರಿಸರದಲ್ಲಿ ತ್ರೈಪುರುಷ ದೇವಾಲಯ, ಮಧುಸೂಧನಾಲಯ, ಜೈನ ಬಸದಿ, ರಾಮೇಶ್ವರ ದೇವಾಲಯ, ಲಕ್ಷ್ಮಣೇಶ್ವರ ದೇವಾಲಯ, ಸಿದ್ದೇಶ್ವರ ದೇವಾಲಯ, ಈರಪ್ಪಯ್ಯನ ಗದ್ದುಗೆ, ನಾಟ್ಯಶಾಲೆ, ಆಂಜನೇಯ ದೇವಾಲಯ ಹಾಗೂ ನಾಗವೇಲಾಂಬಿಕಾ ದೇವಸ್ಥಾನ ಸೇರಿದಂತೆ ಹಲವು ಐತಿಹಾಸಿಕ ಸ್ಮಾರಕಗಳಿವೆ. ಸಕಲ ಮತಧರ್ಮಗಳ ಕೇಂದ್ರವಾಗಿದ್ದ ನಾಗಾವಿಯನ್ನು ದಕ್ಷಿಣದ ಕಾಶಿ ಎಂದು ಕರೆಯಲಾಗುತ್ತಿತ್ತು. ರಾಮೇಶ್ವರ ದೇವಾಲಯದಲ್ಲಿ ಪುರಾಣ ಪ್ರವಚನಗಳು ನಡೆಯುತ್ತಿದ್ದರೆ, ಸಿದ್ದೇಶ್ವರ ಮಠದಲ್ಲಿ ಯೋಗಿ ಸನ್ಯಾಸಿಗಳು ವಾಸಿಸಿ ಜನರಿಗೆ ಯೋಗಾಭ್ಯಾಸ ಕಲಿಸುತ್ತಿದ್ದರು. ಈ ಕಾರಣದಿಂದ ನಾಗಾವಿಯನ್ನು ದಕ್ಷಿಣದ ತಕ್ಷಶಿಲಾ ಎಂದೂ ಕರೆಯಲಾಗುತ್ತಿತ್ತು ಎಂದು ಡಾ. ಗಾರಂಪಳ್ಳಿ ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಪದ್ಮಣ್ಣ ರಾಸಣಗಿ, ಭೀಮಣ್ಣ ಸಾಲಿ, ಡಾ. ನಾಗವೇಣಿ, ಮಲ್ಲಿಕಾರ್ಜುನ ಬಿರಾದಾರ, ಕೈಲಾಸಪತಿ ವಿಶ್ವಕರ್ಮ, ಶ್ರೀಕಾಂತ ಓಮಣ್ಣ, ಮಹಾದೇವ ಶಾಸ್ತ್ರಿ, ಶ್ರೀನಾಥ, ಶರಣಪ್ಪ ಸೇರಿದಂತೆ ಹಲವರು ಭಾಗವಹಿಸಿದ್ದರು

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ: ಎನ್‌ಡಿಎ ಅಭ್ಯರ್ಥಿ ಶಶೀಲ್ ನಮೋಶಿ ಗೆಲುವು

ಕಲಬುರಗಿ :

ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತ ಎಣಿಕೆಯಲ್ಲಿ ಎನ್‌ಡಿಎ ಅಭ್ಯರ್ಥಿ ಶಶೀಲ್ ಜಿ.ನಮೋಶಿ ಮುನ್ನಡೆ ಸಾಧಿಸಿದ್ದು, ಎರಡನೇ ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಂಡಿದ್ದಾರೆ. ಈ ಮೂಲಕ ಅವರ ಗೆಲುವು ಬಹುತೇಕ ಖಚಿತವಾಗಿದೆ. ಅಧಿಕೃತ ಘೋಷಣೆಯಷ್ಟೇ ಬಾಕಿಯಿದೆ.

ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಹಿನ್ನಡೆ ಅನುಭವಿಸಿದ್ದಾರೆ.



ಮೊದಲ ಸುತ್ತಿನ ಪ್ರಥಮ ಪ್ರಾಶಸ್ತ್ಯದ ಮತಗಳ ಎಣಿಕೆಯಲ್ಲಿ ಶಶೀಲ್ ಜಿ. ನಮೋಶಿ ಅವರು ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರಿಗಿಂತ 1,529 ಮತಗಳ ಮುನ್ನಡೆ ಸಾಧಿಸಿದ್ದರು. ಎರಡನೇ ಸುತ್ತಿನಲ್ಲೂ ನಮೋಶಿ ಮುನ್ನಡೆ ಮುಂದುವರಿಸಿದ್ದು, 3 ಸಾವಿರಕ್ಕೂ ಹೆಚ್ಚು ಮತಗಳ ಅಂತರದ ಮುನ್ನಡೆ ಸಾಧಿಸಿದ್ದಾರೆ ಎಂದು ವರದಿಯಾಗಿದೆ.

ಕ್ಷೇತ್ರದಲ್ಲಿ ಒಟ್ಟು 34,784 ಮತದಾರರಿದ್ದು, ಅವರಲ್ಲಿ 30,250 ಮಂದಿ ಮತ ಚಲಾಯಿಸಿದ್ದರು. ಮೊದಲ ಸುತ್ತಿನಲ್ಲಿ ಒಟ್ಟು 14,001 ಮತಗಳನ್ನು ಎಣಿಕೆ ಮಾಡಲಾಗಿತ್ತು. ಈ ಪೈಕಿ 13,183 ಮತಗಳು ಸಿಂಧುವಾಗಿದ್ದು, 818 ಮತಗಳು ತಿರಸ್ಕೃತಗೊಂಡಿದ್ದವು.

ಶಶೀಲ್ ನಮೋಶಿ ಅವರ ಗೆಲುವಿನ ಅಧಿಕೃತ ಘೋಷಣೆ ಇನ್ನಷ್ಟೇ ಬಾಕಿಯಿದೆ.

ಶಶೀಲ್ ನಮೋಶಿ ಪರಿಚಯ ಇಲ್ಲಿದೆ : ಬಿಜೆಪಿ ಜೆಡಿಎಸ್ ಮೈತ್ರಿಕೂಟದ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಬಿಜೆಪಿ ಹಿರಿಯ ನಾಯಕ ಶಶೀಲ್ ಜಿ.ನಮೋಶಿ ಅವರು ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಐದನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಕಲಬುರಗಿಯ ಪ್ರತಿಷ್ಠಿತ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ (ಎಚ್‌ಕೆಇ) ಅಧ್ಯಕ್ಷರಾಗಿರುವ ನಮೋಶಿ ಅವರು, ಶಿಕ್ಷಕರೊಂದಿಗೆ ನಿರಂತರ ಸಂಪರ್ಕ ಹೊಂದಿದ್ದು, ಶಿಕ್ಷಣ ಕ್ಷೇತ್ರದ ಸಮಸ್ಯೆಗಳು, ಶಿಕ್ಷಕರ ಹಕ್ಕುಗಳ ರಕ್ಷಣೆ, ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಹಾಗೂ ಸಂವಿಧಾನದ 371(ಜೆ) ವಿಧಿಯ ಸಮರ್ಪಕ ಅನುಷ್ಠಾನ ಸೇರಿದಂತೆ ವಿವಿಧ ವಿಚಾರಗಳ ಕುರಿತು ಧ್ವನಿ ಎತ್ತುತ್ತಾ ಬಂದಿದ್ದಾರೆ.

ರಾಜಕೀಯ ಹಿನ್ನೆಲೆ :


1956ರ ಸೆ.21ರಂದು ಕಲಬುರಗಿಯಲ್ಲಿ ಜನಿಸಿದ ಶಶೀಲ್ ಜಿ. ನಮೋಶಿ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ಮಾಜಿ ಶಾಸಕ ದಿವಂಗತ ಗಂಗಾಧರ ನಮೋಶಿ ಅವರ ಪುತ್ರರಾಗಿರುವ ಅವರು, 199091ರಲ್ಲಿ ಗುಲ್ಬರ್ಗಾ ಮಹಾನಗರ ಪಾಲಿಕೆಯ ಉಪಮೇಯರ್ ಆಗಿ ಸೇವೆ ಸಲ್ಲಿಸಿದ್ದಾರೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ 19962002, 20022008 ಹಾಗೂ 20082014ರ ಅವಧಿಯಲ್ಲಿ ಸತತವಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. 2014ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ ಅವರ ವಿರುದ್ಧ ಸೋಲು ಕಂಡಿದ್ದರು. ಬಳಿಕ 2020ರಲ್ಲಿ ನಡೆದ ಚುನಾವಣೆಯಲ್ಲಿ ಮಟ್ಟೂರ ಅವರನ್ನು ಸೋಲಿಸಿ ಮತ್ತೆ ವಿಧಾನ ಪರಿಷತ್ ಪ್ರವೇಶಿಸಿದ್ದರು.

ಮನೆಯ ಛಾವಣಿಯಲ್ಲಿ ಆಕಸ್ಮಿಕ ಬೆಂಕಿ

ಕಲಬುರಗಿ, ಅ.27-

ನಗರದ ಪಿಡಿಎ ಇಂಜಿನಿಯರಿಂಗ್ ಕಾಲೇಜು ರಸ್ತೆಯಲ್ಲಿರುವ ಎ.ಕೆ. ಇಂಫ್ರಾ ಸಂಸ್ಥೆಗೆ ಸೇರಿದ ಮನೆಯ ಹಿಂಭಾಗದ ಛಾವಣಿಯಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತ್ತು. ಮಾಹಿತಿ ಪಡೆದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ಇತರ ಭಾಗಗಳಿಗೆ ಹರಡದಂತೆ ಮುನ್ನೆಚ್ಚರಿಕೆ ವಹಿಸಿ ನಂದಿಸುವ ಕಾರ್ಯಾಚರಣೆ ನಡೆಸಿದರು.



ಛಾವಣಿಯ ಮೇಲಿದ್ದ ಜಾಲರಿ ಹಾಗೂ ಪ್ಲಾಸ್ಟಿಕ್ ಕಸಕ್ಕೆ ಬೆಂಕಿ ಹೊತ್ತಿಕೊಂಡ ಪರಿಣಾಮ ದಟ್ಟ ಹೊಗೆ ಆವರಿಸಿತ್ತು. ಇದರಿಂದ ಸುತ್ತಮುತ್ತಲಿನ ನಿವಾಸಿಗಳು ಹಾಗೂ ಎಸ್.ಆರ್. ಮನೋರಮಾ ಎಂಬಸಿ ಮತ್ತು ರಿಗಲ್ ಲಾಡ್ಜ್ ನಲ್ಲಿದ್ದವರಲ್ಲಿ ಆತಂಕ ಉಂಟಾಯಿತು.

ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

ಒಂದನೇಯ ಪುಟದಿಂದ

ರಾಯಚೂರು ತಾಲೂಕಿನ 53 ಹಾಗೂ 54ನೇ ಮತ ಕ್ಷೇತ್ರಗಳಲ್ಲಿ ಎಸ್.ಐ.ಆರ್. ಪ್ರಕ್ರಿಯೆ ಅಚ್ಚುಕಟ್ಟಾಗಿ ನಿರ್ವಹಣೆ: ತಹಶೀಲ್ದಾರ್ ಸುರೇಶ ವರ್ಮಾ

ಇದ್ದು, ಶೇಕಡಾವಾರು ಲೆಕ್ಕಾಚಾರದಲ್ಲಿ ಪುರುಷ ಮತದಾರರ ಸಂಖ್ಯೆ ಶೇ.48.71 ಮತ್ತು ಮಹಿಳಾ ಮತದಾರರ ಸಂಖ್ಯೆ ಶೇ. 51.25 ರಷ್ಟಿದೆ ಎಂದರು.

ಒಟ್ಟು 70,725 ಜನರನ್ನು ಮತದಾರರ ಪಟ್ಟಿಯಿಂದ ಅನರ್ಹ ರೆಂದು ಗುರುತಿಸಿ ಹೊರಗಿಡಲಾಗಿದೆ. ಈ ಎರಡೂ ಮತಕ್ಷೇತ್ರಗಳಲ್ಲಿ ಪುರುಷರಿಗಿಂತ ಮಹಿಳಾ ಮತದಾ ರರ ಸಂಖ್ಯೆ ಅಧಿಕವಾಗಿ ರುವುದು ಕಂಡುಬದಿದೆ. 18 ವರ್ಷ ತುಂಬಿದ ಹೊಸಬರು ಹೆಸರು ಸೇರಿಸಲು, ತಿದ್ದುಪಡಿ ಹಾಗೂ ವಿಶೇಷ ಸಮರಿ ರಿವಿಷನ್ ನಿರಂತರವಾಗಿ ಮುಂದುವರಿಯಲಿದೆ ಎಂದರು.

ರಾಯಚೂರು ವಿಧಾನಸಭಾ ಕ್ಷೇತ್ರಗಳ ಚುನಾವಣಾ ಪ್ರಕ್ರಿಯೆಯು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ರಾಯಚೂರು ಗ್ರಾಮೀಣ (53) ಮತಕ್ಷೇತ್ರದ ನೊಂದಣಾ ಅಧಿಕಾರಿಯಾಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಹಾಗೂ ರಾಯಚೂರು ನಗರ (54) ಮತಕ್ಷೇತ್ರದ ಚುನಾವಣಾ ಅಧಿಕಾರಿಯಾಗಿ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮಹಾಪಾತ್ರ ಅವರು ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ ಈ ಎರಡು ಮತಕ್ಷೇತ್ರಗಳ ಸಹಾಯಕ ಮತದಾರರ ನೊಂದಣಾ ಅಧಿಕಾರಿಯಾಗಿ ರಾಯಚೂರು ತಹಶೀಲ್ದಾರ್ ಅವರು ಕಾರ್ಯನಿರ್ವಹಿಸಿದ್ದು, ಇವರೊಂದಿಗೆ ಕಚೇರಿಯ ಇಬ್ಬರು ಶಿರಸ್ತೇದಾರರು ಹಾಗೂ ಎಲ್ಲಾ ಸಿಬ್ಬಂದಿಗಳು ಕಾರ್ಯನಿರ್ವಹಿಸಿದ್ದಾರೆ ಎಂದರು.

ಬಿ.ಎಲ್.ಒ ಮೇಲ್ವಿಚಾರಕರು, ನೋಡಲ್ ಅಧಿಕಾರಿಗಳು, ವಿವಿಧ ತಂತ್ರಜ್ಞಾನಗಳು ಹಾಗೂ ಹೆಚ್ಚುವರಿ ಸಹಾಯಕ ಮತದಾರರ ನೊಂದಣಾಧಿಕಾರಿಗಳು ಅತ್ಯಂತ ಶ್ರಮವಹಿಸಿ ಉತ್ತಮ ಮತದಾರರ ಪಟ್ಟಿಯನ್ನು ತಯಾರಿಸಲು ಸಹಾಯ ಮಾಡಿದ್ದಾರೆ. ಸುಮಾರು ಎರಡು ತಿಂಗಳ ಕಾಲ ನಡೆದ ಈ ಚುನಾವಣಾ ಕಾರ್ಯದಲ್ಲಿ ಎಲ್ಲರೂ ಅತ್ಯಂತ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಚುನಾವಣೆಯಲ್ಲಿ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಮಾಧ್ಯಮದವರು, ಸಾರ್ವಜನಿಕರು ಮತ್ತು ಮತದಾರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅಲ್ಲದೆ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಅವರ ಮಾರ್ಗದರ್ಶನದಲ್ಲಿ ಹಾಗೂ ಮೇಲ್ವಿಚಾರಣಾ ಮಟ್ಟದ ಎಲ್ಲಾ ತಂಡದವರು ಮತ್ತು ತಾಂತ್ರಿಕ ಜ್ಞಾನವುಳ್ಳ ಆಪರೇಟರ್‌ಗಳು ಎಲ್ಲರಿಗೂ ಈ ಎಸ್ಐಆರ್ ಯಶಸ್ವಿಯಾಗಿ ಮುಗಿಸಲು ಕಾರಣರಾಗಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತ ಶರಣಪ್ಪ ಸೇರಿದಂತೆ ವಿವಿಧ ರಾಜಕೀಯ ಮುಖಂಡರು, ಅಧಿಕಾರಿ, ಸಿಬ್ಬಂದಿಗಳು ಇದ್ದರು.

ರಾಯಚೂರು 10 ತಿಂಗಳ ಬಾಕಿ ವೇತನ ಪಾವತಿಗೆ ಆಗ್ರಹಿಸಿ ತುಂಗಭದ್ರಾ ನೀರಾವರಿ ಇಲಾಖೆ ಕಾರ್ಮಿಕರ ಧರಣಿ

ತಕ್ಷಣ ಟೆಂಡರ್ ಪ್ರಕ್ರಿಯೆ ಕೈಗೊಂಡು ಆದಷ್ಟು ಬೇಗ ಕಾರ್ಮಿಕರಿಗೆ ವೇತನ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕಾರ್ಮಿಕರ ಬಾಕಿ ವೇತನ ಪಾವತಿಯಾಗುವವರೆಗೆ ಸಂಬಂಧಪಟ್ಟ ಅಧಿಕಾರಿಗಳು ವಿಳಂಬ ಮಾಡದೆ, ನೀಡಿರುವ ಭರವಸೆಯನ್ನು ಕಾರ್ಯರೂಪಕ್ಕೆ ತರಬೇಕು ಎಂದು ಕಾರ್ಮಿಕರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾರ್ಮಿಕರಾದ ಜಲೀಲ್ ಪಾಷಾ, ಗೋಪಾಲರಾವ್, ರಂಗಪ್ಪ ನಾಯಕ, ಶಿವಣ್ಣ, ಇಮ್ರಾನ್, ಗೌಸ್ ಸೇರಿದಂತೆ ಎಲ್ಲಾ ಕಾರ್ಮಿಕರು ಇದ್ದರು.

ರಾಯಚೂರು 10 ತಿಂಗಳ ಬಾಕಿ ವೇತನ ಪಾವತಿಗೆ ಆಗ್ರಹಿಸಿ ತುಂಗಭದ್ರಾ ನೀರಾವರಿ ಇಲಾಖೆ ಕಾರ್ಮಿಕರ ಧರಣಿ

ಮಾರಾಟ ಮಾಡಿದ ರೈತರಿಗೆ ಬಾಕಿ ಉಳಿದಿರುವ ಹಣವನ್ನು ಪರಿಶೀಲಿಸಿ, ತಕ್ಷಣ ಪಾವತಿಸಲುಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕು.ರೈತರಿಗೆ ಅಗತ್ಯ ರಸಗೊಬ್ಬರ ಹಾಗೂ ಗುಣಮಟ್ಟದ ಬೀಜಗಳು ಸಮರ್ಪಕವಾಗಿ ಮತ್ತು ಸಕಾಲದಲ್ಲಿ ದೊರೆಯುವಂತೆ ಕ್ರಮ ಕೈಗೊಳ್ಳಬೇಕು. ಕೃತಕ ಅಭಾವ ಮತ್ತು ಅನಧಿಕೃತ ಹೆಚ್ಚಿನ ಬೆಲೆ ವಸೂಲಿಯನ್ನು ತಡೆಗಟ್ಟಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂತೋಷ ಗೌಡ,ರಾಮಚಂದ್ರ, ರಾಮನಗೌಡ ಸೇರಿದಂತೆ ಉಪಸ್ಥಿತರಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷ ಗತಿಸಿದರು ಲಿಂಗಸಗೂರು ತಾಲೂಕಿನಲ್ಲಿ ಇನ್ನು ಅಸ್ಪೃಶ್ಯತೆ ಜೀವಂತ

ಈ ಕೃತ್ಯವು ಈ ಕೆಳಗಿನ ಕಾಯ್ದೆಗಳಡಿ ಗಂಭೀರ ಅಪರಾಧವಾಗಿದ್ದು, ಪೊಲೀಸ್ ಇಲಾಖೆ ದೂರು ಬರುವವರೆಗೆ ಕಾಯದೆ ಸ್ವಯಂ ಪ್ರೇರಿತವಾಗಿ ಸುಮಟೋ ಕೇಸ್ ದಾಖಲಿಸಬೇಕು.

1.ಭಾರತ ಸಂವಿಧಾನ ಕಲಂ 17:ಅಸ್ಪೃಶ್ಯತೆ ಆಚರಣೆ ರದ್ದು - ಇದರ ಉಲ್ಲಂಘನೆ.

2. / (ದೌರ್ಜನ್ಯ ತಡೆ) ಕಾಯ್ದೆ 1989 (ತಿದ್ದುಪಡಿ 2015) :

ಕಲಂ 3(1)()() : ಪರಿಶಿಷ್ಟ ಜಾತಿಯ ವ್ಯಕ್ತಿಯನ್ನು ಸಾರ್ವಜನಿಕ ಸ್ಥಳದಲ್ಲಿ ಅವಮಾನಿಸುವುದು, ಅಸ್ಪೃಶ್ಯತೆ ಆಚರಿಸುವುದು.

ಕಲಂ 3(1)(): ಸಾರ್ವಜನಿಕವಾಗಿ ಬಳಕೆಯಾಗುವ ಕುಡಿಯುವ ನೀರಿನ ಮೂಲದಲ್ಲಿ ತಾರತಮ್ಯ ಮಾಡುವುದು.

3. ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ 1955, ಕಲಂ 3 4: ಅಸ್ಪೃಶ್ಯತೆ ಆಧಾರದ ಮೇಲೆ ನೀರು ಕೊಡಲು ನಿರಾಕರಿಸುವುದು.

4. ಭಾರತೀಯ ನ್ಯಾಯ ಸಂಹಿತಾ () 2023, ಕಲಂ 196: ಜಾತಿ ಆಧಾರದ ಮೇಲೆ ದ್ವೇಷ ಹರಡುವುದು.

ಸಾಕ್ಷಿ : ಘಟನೆಯ 24 ಸೆಕೆಂಡ್ ವಿಡಿಯೋ ಲಗತ್ತಿಸಲಾಗಿದೆ. ಇದು ಪ್ರಬಲ ಸಾಕ್ಷ್ಯ.

ನಮ್ಮ ಬೇಡಿಕೆ :-

1. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ಯಾವುದೇ ದೂರುದಾರನ ಕಾಯದೆ ಸ್ವಯಂಪ್ರೇರಿತವಾಗಿ ಸುಮಟೋ ಕೇಸ್ ದಾಖಲಿಸಬೇಕು.

2. ಆರೋಪಿ ವೀರಭದ್ರಪ್ಪ ಗೌಡ ಅವರ ಹೋಟೆಲ್ ಟ್ರೇಡ್ ಲೈಸೆನ್ಸ್ ರದ್ದು ಮಾಡಲು ಗ್ರಾಮ ಪಂಚಾಯತಿಗೆ ಶಿಫಾರಸು ಮಾಡಬೇಕು.

3. ಸಂತ್ರಸ್ತ ಚಿದಾನಂದ ಅವರಿಗೆ / ಕಾಯ್ದೆ ನಿಯಮ 12(4) ರಂತೆ ತಕ್ಷಣದ ಪರಿಹಾರ ರೂ. 1,00,000 ಕೊಡಿಸಬೇಕು.

ದೂರು ಬಂದ ನಂತರವೇ ಎಫ್ ಐ ಆರ್ ಮಾಡುತ್ತೇವೆ ಎನ್ನುವುದು / ಕಾಯ್ದೆಯ ಉದ್ದೇಶಕ್ಕೆ ವಿರುದ್ಧ. ಮಾನ್ಯ ಸುಪ್ರೀಂ ಕೋರ್ಟ್ .. ಪ್ರಕರಣದಲ್ಲಿ ಹೇಳಿದಂತೆ, ಅಸ್ಪೃಶ್ಯತೆಯಂತಹ ವಿಡಿಯೋ ಸಾಕ್ಷಿ ಇದ್ದಾಗ ಪೊಲೀಸರು ತಾವೇ ಪ್ರಕರಣ ದಾಖಲಿಸಬೇಕು.

ದಯವಿಟ್ಟು 24 ಗಂಟೆಯೊಳಗೆ ಎಫ್ ಐ ಆರ್ ದಾಖಲಿಸಿ ನ್ಯಾಯ ಒದಗಿಸಬೇಕೆಂದರು . ಈ ಸಂದರ್ಭದಲ್ಲಿ ಅಮರೇಶ್ ಹೆಚ್ ಆನೆಹೊಸೂರು ತಾಲೂಕು ಪ್ರಧಾನ ಕಾರ್ಯದರ್ಶಿ, ಅಂಬೇಡ್ಕರ್ ಸೇನೆ, ಆದೇಶ , ಭೀಮಣ್ಣ ಸೇರಿದಂತೆ ಇತರರು ಇದ್ದರು .

20-30 ವರ್ಷಗಳಿಂದ ನೀರು, ರಸ್ತೆ, ಬೀದಿದೀಪಗಳ ಸಮಸ್ಯೆ: ನಿವಾಸಿಗಳ ಅಳಲು ಆಲಿಸಿದ -ರಾಮನಗೌಡ ಏಗನೂರು

ಕಾಲನಿಯ ಹಲವು ಕಡೆಗಳಲ್ಲಿ ಬೀದಿದೀಪಗಳಿಲ್ಲದ ಕಾರಣ ರಾತ್ರಿ ವೇಳೆ ಸಂಚಾರ ದುಸ್ತರವಾಗಿದೆ. ಕತ್ತಲಿನಲ್ಲಿ ವಾಹನ ಸವಾರರು ಹಾಗೂ ಪಾದಚಾರಿಗಳು ಅಪಘಾತದ ಭೀತಿ ಎದುರಿಸುತ್ತಿದ್ದಾರೆ. ವಿದ್ಯುತ್ ಕಂಬಗಳ ಬಳಿ ಅಸಮರ್ಪಕವಾಗಿ ಹರಡಿರುವ ತಂತಿಗಳಿಂದ ಮಕ್ಕಳ ಸುರಕ್ಷತೆಗೂ ಅಪಾಯವಿದೆ ಎಂದು ನಿವಾಸಿಗಳು ಕಳವಳ ವ್ಯಕ್ತಪಡಿಸಿದರು.

ಬೀದಿದೀಪಗಳನ್ನು ಅಳವಡಿಸುವುದರ ಜೊತೆಗೆ ಅಗತ್ಯ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಸ್ಥಾಪಿಸಿ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಬಡ ಕುಟುಂಬಗಳ ಸಂಕಷ್ಟಕ್ಕೆ ಸ್ಪಂದಿಸಲು ಆಗ್ರಹ

ಕಾಲನಿಯಲ್ಲಿ ಬಹುತೇಕ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳು ವಾಸಿಸುತ್ತಿದ್ದು, ಅನೇಕರು ದಿನಗೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇಂತಹ ಕುಟುಂಬಗಳಿಗೆ ಕುಡಿಯುವ ನೀರು, ಉತ್ತಮ ರಸ್ತೆ, ಬೀದಿದೀಪ ಹಾಗೂ ಸ್ವಚ್ಛತೆಯಂತಹ ಕನಿಷ್ಠ ಸೌಲಭ್ಯಗಳೂ ದೊರೆಯದಿರುವುದು ದುರದೃಷ್ಟಕರ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಸ್ವಚ್ಛತೆ ಮತ್ತು ಶೌಚಾಲಯಗಳ ಸಮರ್ಪಕ ವ್ಯವಸ್ಥೆಯ ಕೊರತೆಯಿಂದ ಮಕ್ಕಳ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಆತಂಕವಿದೆ ಎಂದು ತಿಳಿಸಿದರು.

ಆಯುಕ್ತರು, ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಲು ಒತ್ತಾಯ

ಈ ಸಮಸ್ಯೆಗಳ ಕುರಿತು ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸೂಕ್ತ ಪರಿಹಾರ ದೊರೆತಿಲ್ಲ ಎಂಬುದು ನಿವಾಸಿಗಳ ಆರೋಪವಾಗಿದೆ. ದೊಡ್ಡ ಅಭಿವೃದ್ಧಿ ಕಾಮಗಾರಿಗಳಿಗಿಂತ ಬದುಕಲು ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂಬುದೇ ತಮ್ಮ ಪ್ರಮುಖ ಬೇಡಿಕೆ ಎಂದು ಅವರು ಸ್ಪಷ್ಟಪಡಿಸಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಾಪಾತ್ರ, ಹಾಗೂ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಕಾಲನಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಬೇಕು. ನಿವಾಸಿಗಳ ಸಮಸ್ಯೆಗಳನ್ನು ಆಲಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಕುಡಿಯುವ ನೀರು, ರಸ್ತೆ, ಬೀದಿದೀಪ ಹಾಗೂ ಸ್ವಚ್ಛತೆಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಜೆಡಿಎಸ್ ಮುಖಂಡ ರಾಮನಗೌಡ ಏಗನೂರು ಆಗ್ರಹಿಸಿದರು.

ದಶಕಗಳಿಂದ ಮೂಲಸೌಕರ್ಯಗಳ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿರುವ ನಿವಾಸಿಗಳಿಗೆ ಇನ್ನಾದರೂ ನ್ಯಾಯ ದೊರೆಯಬೇಕು. ಜನರ ಮೂಲಭೂತ ಅಗತ್ಯಗಳನ್ನು ಈಡೇರಿಸುವುದು ಮಹಾನಗರ ಪಾಲಿಕೆಯ ಜವಾಬ್ದಾರಿಯಾಗಿದ್ದು, ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಪೂರ್ವಜರ ಜ್ಞಾನ ಮುಂದಿನ ಪೀಳಿಗೆಗೆ ಪರಿಚಯಿಸುವ ಮಾಧ್ಯಮಗಳೇ ಹಸ್ತಪ್ರತಿಗಳು : ಡಾ.ಡಿ.ವಿ.ಪರಮಶಿವಮೂರ್ತಿ

ಬೀದರ್

ನಮ್ಮ ನಾಡಿನ ಪೂರ್ವಜರ ಜ್ಞಾನ, ಸಂಸ್ಕೃತಿ ಹಾಗೂ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಮುಖ ಮಾಧ್ಯಮಗಳೇ ಹಸ್ತಪ್ರತಿಗಳು. ದೇಶದಲ್ಲಿಯೇ ಹಸ್ತಪ್ರತಿಗಳ ಅಧ್ಯಯನ ಮತ್ತು ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಿ ಸಮ್ಮೇಳನಗಳನ್ನು ಆಯೋಜಿಸುತ್ತಿರುವ ಏಕೈಕ ವಿಶ್ವವಿದ್ಯಾಲಯ ಹಂಪಿ ಕನ್ನಡ ವಿಶ್ವವಿದ್ಯಾಲಯವಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.



ನಗರದ ಕರ್ನಾಟಕ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕ.ರಾ.ಶಿ. ಸಂಸ್ಥೆಯ ಕಲ್ಯಾಣ ಕರ್ನಾಟಕ ಸಂಶೋಧನಾ ಕೇಂದ್ರ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಆಯೋಜಿಸಿದ್ದ 23ನೇ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಲಿಪಿಯು ಕಾಲದಿಂದ ಕಾಲಕ್ಕೆ ಬದಲಾವಣೆಗಳನ್ನು ಕಂಡಿದ್ದು, ಸುಮಾರು ಒಂದು ಸಾವಿರ ವರ್ಷಗಳ ಲಿಪಿ ವಿಕಾಸದ ಇತಿಹಾಸ ಹೊಂದಿದೆ. ಹೀಗಾಗಿ ಪ್ರಾಚೀನ ಹಸ್ತಪ್ರತಿಗಳಲ್ಲಿರುವ ಲಿಪಿಯನ್ನು ಓದುವುದು ಇಂದಿನ ಕಾಲದಲ್ಲಿ ಸವಾಲಿನ ಕೆಲಸವಾಗಿದೆ. ಆದರೆ, ಈ ಕಾರಣಕ್ಕೆ ಹಸ್ತಪ್ರತಿಗಳನ್ನು ನಿರ್ಲಕ್ಷಿಸಬಾರದು. ಅವುಗಳಲ್ಲಿ ನಮ್ಮ ಸಂಸ್ಕೃತಿ, ಇತಿಹಾಸ ಹಾಗೂ ಪರಂಪರೆಗೆ ಸಂಬಂಧಿಸಿದ ಅಮೂಲ್ಯ ಮಾಹಿತಿಗಳು ಅಡಕವಾಗಿವೆ ಎಂದು ಹೇಳಿದರು.

ಹಸ್ತಪ್ರತಿಗಳು ಹಿಂದಿನ ಕಾಲದ ಜ್ಞಾನವನ್ನು ಇಂದಿನ ಪೀಳಿಗೆಯೊಂದಿಗೆ ಸಂವಹನಗೊಳಿಸುವ ಮಹತ್ವದ ಮಾಧ್ಯಮಗಳಾಗಿವೆ. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆ, ಅಧ್ಯಯನ, ಅಧ್ಯಾಪನ, ವ್ಯಾಖ್ಯಾನ ಹಾಗೂ ವಿಶ್ಲೇಷಣೆಯ ಮೂಲಕ ಹಸ್ತಪ್ರತಿಶಾಸ್ತ್ರ ವಿಭಾಗವು ಕಳೆದ ಮೂರು ದಶಕಗಳಿಂದ ಮಹತ್ವದ ಸಾಂಸ್ಕೃತಿಕ ಜಾಗೃತಿ ಮೂಡಿಸುತ್ತಿದೆ ಎಂದು ತಿಳಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಹಿರಿಯ ಹಸ್ತಪ್ರತಿ ಪಂಡಿತ ಡಾ. ನಾ. ಗೀತಾಚಾರ್ಯ ಮಾತನಾಡಿ, ಸರ್ಕಾರದಲ್ಲಿ ಶಾಸನಗಳು, ಪುರಾತತ್ವ, ದಾಖಲೆಗಳು, ಪುಸ್ತಕಗಳು ಹಾಗೂ ಪ್ರಾಚೀನ ವಸ್ತುಗಳ ಸಂರಕ್ಷಣೆಗೆ ಪ್ರತ್ಯೇಕ ಇಲಾಖೆಗಳಿದ್ದರೂ, ಹಸ್ತಪ್ರತಿಗಳಿಗಾಗಿ ಪ್ರತ್ಯೇಕ ಇಲಾಖೆ ಇಲ್ಲದಿರುವುದು ವಿಷಾದನೀಯ. ಅಮೂಲ್ಯ ಹಸ್ತಪ್ರತಿಗಳು ಸೂಕ್ತ ಸಂರಕ್ಷಣೆಯ ಕೊರತೆಯಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ನಾಶವಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಈ ಹಿಂದೆ ರಾಷ್ಟ್ರೀಯ ಹಸ್ತಪ್ರತಿ ಮಿಷನ್ ಮೂಲಕ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆಗೆ ನೆರವು ನೀಡುತ್ತಿತ್ತು. ಇದೀಗ ಜ್ಞಾನ ಭಾರತಂ ಮಿಷನ್ ಮೂಲಕ ದೇಶಾದ್ಯಂತ ಹಸ್ತಪ್ರತಿಗಳ ಸಮೀಕ್ಷೆ ನಡೆಸಿ, ಲಭ್ಯವಿರುವ ಹಸ್ತಪ್ರತಿಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯ ನಡೆಯುತ್ತಿದೆ. ಈ ಕಾರ್ಯದಲ್ಲಿ ಹಸ್ತಪ್ರತಿ ಶಾಸ್ತ್ರ ಕ್ಷೇತ್ರವೂ ಕೈಜೋಡಿಸಿದೆ ಎಂದು ಹೇಳಿದರು. ರಾಜ್ಯ ಸರ್ಕಾರ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆಗೆ ಪ್ರತ್ಯೇಕ ಹಸ್ತಪ್ರತಿ ಸಂಗ್ರಹಾಲಯ ಸಂಸ್ಥೆಯನ್ನು ಸ್ಥಾಪಿಸಬೇಕು. ಪ್ರತಿ ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಹಸ್ತಪ್ರತಿ ಸಂಗ್ರಹಾಲಯಗಳನ್ನು ಆರಂಭಿಸುವ ಮೂಲಕ ಈ ಅಮೂಲ್ಯ ಜ್ಞಾನಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡಬೇಕು ಎಂದು ಆಗ್ರಹಿಸಿದರು. ಬೀದರ್ ವಿಶ್ವವಿದ್ಯಾಲ ಯದ ಕುಲಪತಿ ಡಾ. ಬಿ.ಎಸ್. ಬಿರಾದಾರ್ ಅವರು ಹಸ್ತಪ್ರತಿ ವ್ಯಾಸಂಗ 26 ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿ, ಎಲೆಮರೆಯ ಕಾಯಿಯಂತೆ ಉಳಿದಿರುವ ವಿದ್ವಾಂಸರನ್ನು ಗುರುತಿಸಿ, ಅವರ ವಿದ್ವತ್ತು ಹಾಗೂ ಜ್ಞಾನ ಪರಂಪರೆಯ ಕುರಿತು ಚರ್ಚಿಸುವುದು ಮತ್ತು ಅವರ ಉಪನ್ಯಾಸಗ ಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಸಾನ್ನಿಧ್ಯ ವಹಿಸಿದ್ದರು. ಕ.ರಾ.ಶಿ. ಸಂಸ್ಥೆಯ ಅಧ್ಯಕ್ಷ ಬಸವರಾಜ್ ಜಾಬಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವೀರೇಶ ಬಡಿಗೇರ್ ಸಾಹಿತಿ ಡಾ. ಕಲ್ಯಾಣರಾವ್ ಪಾಟೀಲ್, ಬಸವರಾಜ್ ಜಿ. ಪಾಟೀಲ್ ಅಷ್ಟೂರ್ ಸತೀಶ್ ಪಾಟೀಲ್ ಹಾಗೂ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಚೆನ್ನಶೆಟ್ಟಿ ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಮಹಾನಂದಾ ಮಡಕಿ ಸ್ವಾಗತಿಸಿದರು. ಡಾ. ಶಿವಶಂಕರ್ ಟೋಕರೆ ನಿರೂಪಿಸಿದರು. ಶಾಂತಕುಮಾರ್ ಪಾಟೀಲ್ ವಂದಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಪ್ರಜ್ಞಾವಂತರೇ ಮರೆತರೆ ಮತದಾನದ ಮಹತ್ವ?: ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ 10,245 ಮತಗಳು ಅಸಿಂಧು!

ನಿಯಮಾನುಸಾರ ಚಲಾಯಿಸುವ ಬದಲು, ಮತಪತ್ರದಲ್ಲಿ ಅನಗತ್ಯ ಬರಹ ಹಾಗೂ ಗುರುತುಗಳನ್ನು ಹಾಕಿರುವುದು ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ಧಕ್ಕೆ ತಂದಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಪಶ್ಚಿಮ ಪದವೀಧರ ಕ್ಷೇತ್ರವು ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಕ್ಷೇತ್ರದಲ್ಲಿ ಸುಮಾರು 97 ಸಾವಿರ ಮತದಾರರಿದ್ದು, ಅವರಲ್ಲಿ ಶೇ.75.61ರಷ್ಟು ಮಂದಿ ಮತ ಚಲಾಯಿಸಿದ್ದಾರೆ. ಆದರೆ, ಚಲಾವಣೆಯಾದ ಮತಗಳಲ್ಲಿ ಹತ್ತು ಸಾವಿರಕ್ಕೂ ಅಧಿಕ ಮತಗಳು ಅಸಿಂಧುಗೊಂಡಿರುವುದು ಕಳವಳಕಾರಿ ಸಂಗತಿಯಾಗಿದೆ.

ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಿರುವ ಅಸಿಂಧು ಮತಗಳು: 2020ರ ಚುನಾವಣೆಯಲ್ಲಿಯೂ ಪದವೀಧರ ಮತದಾರರು ಇದೇ ರೀತಿಯಲ್ಲಿ ತಮ್ಮ ಅಮೂಲ್ಯ ಮತಗಳನ್ನು ಹಾಳು ಮಾಡಿಕೊಂಡಿದ್ದರು. ಈ ಪ್ರವೃತ್ತಿಯನ್ನು ತಡೆಯಲು ಚುನಾವಣಾ ಆಯೋಗ ಈ ಬಾರಿ ಮತದಾನದ ಮಹತ್ವ ಮತ್ತು ಮತಪತ್ರವನ್ನು ಸರಿಯಾಗಿ ಗುರುತಿಸುವ ವಿಧಾನದ ಕುರಿತು ಜಾಗೃತಿ ಮೂಡಿಸಿತ್ತು. ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಪಕ್ಷೇತರ ಅಭ್ಯರ್ಥಿಗಳಿಗೂ ಅಗತ್ಯ ತಿಳಿವಳಿಕೆ ನೀಡಲಾಗಿತ್ತು. ಆದರೂ, ಅಸಿಂಧು ಮತಗಳ ಸಂಖ್ಯೆ ಹೆಚ್ಚಾಗಿರುವುದು ಚರ್ಚೆಗೆ ಗ್ರಾಸವಾಗಿದೆ.

2014ರ ಚುನಾವಣೆಯಲ್ಲಿ 3,240 ಅಸಿಂಧು ಮತಗಳು ದಾಖಲಾಗಿದ್ದರೆ, 2020ರಲ್ಲಿ ಈ ಸಂಖ್ಯೆ 8,772ಕ್ಕೆ ಏರಿಕೆಯಾಗಿತ್ತು. ಇದೀಗ 2026ರ ಚುನಾವಣೆಯಲ್ಲಿ ಅಸಿಂಧು ಮತಗಳ ಸಂಖ್ಯೆ 10,245ಕ್ಕೆ ತಲುಪಿದೆ. ಅಂದರೆ, ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಅಸಿಂಧು ಮತಗಳ ಪ್ರಮಾಣ ಹೆಚ್ಚುತ್ತಲೇ ಸಾಗಿರುವುದು ಮತದಾರರ ಜಾಗೃತಿಯ ಬಗ್ಗೆ ಪ್ರಶ್ನೆ ಮೂಡಿಸಿದೆ.

ಮತ ಎಣಿಕೆಯ ಸಂದರ್ಭದಲ್ಲಿ ಅಸಿಂಧು ಮತಗಳ ಸಂಖ್ಯೆ ಗಮನಾರ್ಹವಾಗಿದ್ದು, ಕೆಲವು ಸುತ್ತುಗಳಲ್ಲಿ ಅವು ಮೂರನೇ ಸ್ಥಾನದಲ್ಲಿರುವ ಅಭ್ಯರ್ಥಿಗೆ ಸಿಗುವ ಮತಗಳಿಗಿಂತಲೂ ಹೆಚ್ಚಿದ್ದವು ಎಂಬ ಚರ್ಚೆ ನಡೆದಿದೆ. ಮತದಾನದ ನಿಯಮಗಳ ಬಗ್ಗೆ ತಿಳಿವಳಿಕೆ ಹೊಂದಿರಬೇಕಾದ ಪದವೀಧರರೇ ಈ ಪ್ರಮಾಣದಲ್ಲಿ ತಪ್ಪು ಮಾಡಿರುವುದು ವಿದ್ಯಾಕಾಶಿ ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಸ್ಥಳೀಯ ಚುನಾವಣೆಗಳಲ್ಲಿ ಕಡಿಮೆ ಅಸಿಂಧು ಮತಗಳು: ಗ್ರಾಮ ಪಂಚಾಯಿತಿ ಹಾಗೂ ಸಹಕಾರ ಸಂಸ್ಥೆಗಳ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಅಸಿಂಧು ಮತಗಳ ಸಂಖ್ಯೆ ಕಡಿಮೆ ಇರುತ್ತದೆ ಎಂಬ ಅಭಿಪ್ರಾಯವಿದೆ. ಆದರೆ, ಉನ್ನತ ಶಿಕ್ಷಣ ಪಡೆದವರೇ ಮತದಾನ ಮಾಡುವ ಪದವೀಧರ ಕ್ಷೇತ್ರದಲ್ಲಿ ಸಾವಿರಾರು ಮತಗಳು ಅಸಿಂಧುಗೊಂಡಿರುವುದು ವಿಪರ್ಯಾಸವಾಗಿದೆ. ಮತದಾನದ ಹಕ್ಕು ಹೊಂದಿರುವುದಷ್ಟೇ ಅಲ್ಲದೆ, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಜವಾಬ್ದಾರಿಯೂ ಪ್ರತಿಯೊಬ್ಬ ಮತದಾರನ ಮೇಲಿದೆ ಎಂಬುದನ್ನು ಈ ಘಟನೆ ನೆನಪಿಸಿದೆ.

ಮತದಾನದ ಹಕ್ಕನ್ನು ಸರಿಯಾಗಿ ಬಳಸಿಕೊಳ್ಳಬೇಕು: ಅಸಿಂಧು ಮತಗಳ ಕುರಿತು ಪ್ರತಿಕ್ರಿಯಿಸಿದ ಹುಡಾ ಮಾಜಿ ಅಧ್ಯಕ್ಷ ಅನ್ವರ್ ಮುಧೋಳ, ಇದು ವಿಷಾದನೀಯ ಸಂಗತಿ ಎಂದು ಅಭಿಪ್ರಾಯಪಟ್ಟರು.

ಮತದಾನ ನಮ್ಮ ಜನ್ಮಸಿದ್ಧ ಹಕ್ಕು. ಪವಿತ್ರವಾದ ಮತವನ್ನು ಸೂಕ್ತ ವ್ಯಕ್ತಿಗೆ ಗೌಪ್ಯವಾಗಿ ಚಲಾಯಿಸಬೇಕು. ಇದು ಸಂವಿಧಾನ ನಮಗೆ ನೀಡಿರುವ ಮಹತ್ವದ ಕೊಡುಗೆ. ಈ ಹಕ್ಕನ್ನು ಸರಿಯಾಗಿ ಬಳಸಿಕೊಳ್ಳದಿರುವುದು ದುರಂತ. ಪದವೀಧರರಾಗಿದ್ದರೂ ಮತಗಳನ್ನು ಅಸಿಂಧುಗೊಳಿಸುತ್ತಿರುವುದು ಬೇಸರದ ಸಂಗತಿ. ಎಂ.ಎ., ಎಂ.ಕಾಂ., ಬಿ.ಕಾಂ. ಹಾಗೂ ಎಲ್‌ಎಲ್‌ಬಿ ಓದಿದವರ ಮತಗಳೂ ಸಾವಿರಾರು ಸಂಖ್ಯೆಯಲ್ಲಿ ಅಸಿಂಧುಗೊಂಡಿರುವುದು ನೋವಿನ ಸಂಗತಿ. ಪದವೀಧರರು ಮುಂದಿನ ದಿನಗಳಲ್ಲಾದರೂ ಸಂವಿಧಾನ ನೀಡಿರುವ ಮತದಾನದ ಹಕ್ಕನ್ನು ಜವಾಬ್ದಾರಿಯಿಂದ ಬಳಸಿಕೊಳ್ಳಬೇಕು ಎಂದು ಹೇಳಿದರು.

ಮತ ಹಾಕುವ ವಿಧಾನ ತಿಳಿಯದಿದ್ದರೆ ಹೇಗೆ?: ಸಾರ್ವಜನಿಕರಾದ ಗೋವಿಂದ ಮುರಗೋಡ ಅವರು ಪ್ರತಿಕ್ರಿಯಿಸಿ, ಪದವೀಧರರೇ ಅವಿದ್ಯಾವಂತರಂತೆ ಮತ ಚಲಾಯಿಸಿರುವುದು ಬೇಸರದ ಸಂಗತಿ. ಓದು - ಬರಹ ಬಾರದವರು, ಕೂಲಿ ಕಾರ್ಮಿಕರು ಹಾಗೂ ಗ್ರಾಮೀಣ ಭಾಗದ ಜನರು ಮತದಾನ ಮಾಡುವಾಗ ತಪ್ಪು ಮಾಡದಂತೆ ಜಾಗೃತಿ ವಹಿಸುತ್ತಾರೆ. ಆದರೆ, ಪದವೀಧರರೇ ಸಾವಿರಾರು ಮತಗಳನ್ನು ಅಸಿಂಧುಗೊಳಿಸಿರುವುದು ನಾಚಿಕೆಗೇಡಿನ ಸಂಗತಿ. ಇಷ್ಟೊಂದು ಸಂಖ್ಯೆಯಲ್ಲಿ ಅಸಿಂಧು ಮತಗಳು ದಾಖಲಾಗುವುದಕ್ಕಿಂತ ಮತದಾರರು ಮತಪತ್ರವನ್ನು ಸರಿಯಾಗಿ ಗುರುತಿಸುವ ವಿಧಾನದ ಬಗ್ಗೆ ತಿಳಿದುಕೊಳ್ಳುವುದು ಮುಖ್ಯ. ಇಂತಹ ಘಟನೆಗಳು ಸಾರ್ವಜನಿಕರಿಗೆ ಯಾವ ಸಂದೇಶ ನೀಡುತ್ತವೆ? ಎಂದು ಪ್ರಶ್ನಿಸಿದರು.

ಮುಂದಿನ ಚುನಾವಣೆಯಲ್ಲಿ ಜಾಗೃತಿ ಮೂಡಿಸಲಾಗುವುದು: ಅಸಿಂಧು ಮತಗಳ ಕುರಿತು ಪ್ರತಿಕ್ರಿಯಿಸಿದ ಶಾಸಕ ಮಹೇಶ ಟೆಂಗಿನಕಾಯಿ, ಹತ್ತು ಸಾವಿರಕ್ಕೂ ಅಧಿಕ ಮತಗಳು ಅಸಿಂಧುಗೊಂಡಿರುವುದು ಖೇದಕರ ಸಂಗತಿ. ಮತದಾರರು ಮತಗಳನ್ನು ಅಸಿಂಧುಗೊಳಿಸಬಾರದು. ಪ್ರತಿಯೊಂದು ಮತವೂ ಮಹತ್ವದ್ದಾಗಿದೆ. ಮುಂದಿನ ಚುನಾವಣೆಯಲ್ಲಾದರೂ ಮತಗಳು ಅಸಿಂಧುಗೊಳ್ಳದಂತೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.


ಪ್ರತಿಯೊಂದು ಮತವೂ ಮುಖ್ಯ: ವಿಧಾನಸಭೆಯ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮಾತನಾಡಿ, ಮತಪತ್ರದಲ್ಲಿ ಅಭ್ಯರ್ಥಿಯ ಎದುರು ಆದ್ಯತೆಯ ಸಂಖ್ಯೆಯನ್ನು ಬರೆಯುವ ಬದಲು ಪಾಸ್ ಮಾರ್ಕ್, ಲವ್ ಚಿಹ್ನೆ ಹಾಗೂ 'ಜೈ' ಎಂಬಂತಹ ಬರಹಗಳನ್ನು ಹಾಕಿರುವುದರಿಂದ ಅನೇಕ ಮತಗಳು ಅಸಿಂಧುಗೊಂಡಿವೆ. ಮತದಾರರು ಜಾಗೃತರಾಗಿ ಮತ ಚಲಾಯಿಸಬೇಕು. ಪ್ರತಿಯೊಂದು ಮತವೂ ಮುಖ್ಯ. ಇಷ್ಟೊಂದು ಸಂಖ್ಯೆಯಲ್ಲಿ ಮತಗಳು ಅಸಿಂಧುಗೊಂಡಿರುವುದು ದುರದೃಷ್ಟಕರ ಎಂದು ಹೇಳಿದರು.

ಮತದಾನದ ಹಕ್ಕಿನ ಜೊತೆಗೆ ಜವಾಬ್ದಾರಿಯೂ ಮುಖ್ಯ: ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಮತಕ್ಕೂ ತನ್ನದೇ ಆದ ಮೌಲ್ಯವಿದೆ. ವಿಶೇಷವಾಗಿ ಪದವೀಧರ ಕ್ಷೇತ್ರದ ಮತದಾರರು ಮತಪತ್ರವನ್ನು ಸರಿಯಾದ ರೀತಿಯಲ್ಲಿ ಗುರುತಿಸಿ, ತಮ್ಮ ಆಯ್ಕೆಯ ಅಭ್ಯರ್ಥಿಗೆ ಆದ್ಯತೆ ನೀಡುವ ಮೂಲಕ ಮತದಾನದ ಹಕ್ಕನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಿದೆ. ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಿರುವ ಅಸಿಂಧು ಮತಗಳ ಪ್ರಮಾಣವನ್ನು ತಗ್ಗಿಸಲು ಚುನಾವಣಾ ಆಯೋಗದ ಜಾಗೃತಿಯ ಜತೆಗೆ ಮತದಾರರ ವೈಯಕ್ತಿಕ ಜವಾಬ್ದಾರಿಯೂ ಅಷ್ಟೇ ಮುಖ್ಯವಾಗಿದೆ.

ನಾರಾಯಣ ಗುರು, ನುಲಿಯ ಚಂದಯ್ಯ ಜಯಂತಿ ಆಚರಿಸದ ಆರೋಪ: ಮುಖ್ಯಶಿಕ್ಷಕ ಅಮಾನತು

ಕಲಬುರಗಿ:

ಬ್ರಹ್ಮಶ್ರೀ ನಾರಾಯಣ ಗುರು ಮತ್ತು ಶ್ರೀ ನುಲಿಯ ಚಂದಯ್ಯ ಅವರ ಜಯಂತಿಗಳನ್ನು ಶಾಲೆಯಲ್ಲಿ ಆಚರಿಸದ ಆರೋಪದಡಿ ಚಿತ್ತಾಪುರ ತಾಲ್ಲೂಕಿನ ಅರಣಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಶಿವಾನಂದ ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ.



ಚಿತ್ತಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಆನಂದಗೌಡ ಬಿರಾದಾರ ಅವರು ಅಕ್ಟೋಬರ್ 12ರಂದು ಅಮಾನತು ಆದೇಶ ಹೊರಡಿಸಿದ್ದಾರೆ.

2026ರ ಆಗಸ್ಟ್ 28ರಂದು ಶಾಲೆಯಲ್ಲಿ ಇಬ್ಬರೂ ಮಹನೀಯರ ಜಯಂತಿಗಳನ್ನು ಆಚರಿಸುವಂತೆ ಶಿಕ್ಷಣ ಇಲಾಖೆಯು ಆಗಸ್ಟ್ 25ರಂದು ಸೂಚಿಸಿತ್ತು. ಆದರೆ, ಜಯಂತಿಗಳನ್ನು ಆಚರಿಸಿಲ್ಲ ಎಂದು ಆರೋಪಿಸಿ ಭೀಮ್ ಆರ್ಮಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಷ್ಣುಸ್ವಾಮಿ ಎನ್. ಹಾಗೂ ರಿಪಬ್ಲಿಕನ್ ಯೂತ್ ಫೋರ್ಸ್ ದಲಿತ ಲಿಬರೇಷನ್ ಆರ್ಮಿಯ ಕಾಳಗಿ ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಬಿ. ವಿರನ್ ಅವರು ಸೆಪ್ಟೆಂಬರ್ 18ರಂದು ದೂರು ಸಲ್ಲಿಸಿದ್ದರು.

ದೂರಿನ ಹಿನ್ನೆಲೆಯಲ್ಲಿ ಅರಣಕಲ್ ವಲಯದ ಸಿಆರ್‌ಪಿ ಸೆಪ್ಟೆಂಬರ್ 21ರಂದು ಶಾಲೆಗೆ ಭೇಟಿ ನೀಡಿ ವರದಿ ಸಲ್ಲಿಸಿದ್ದರು. ಬಳಿಕ ಅಕ್ಟೋಬರ್ 1ರಂದು ಮುಖ್ಯಶಿಕ್ಷಕರಿಗೆ ಕಾರಣ ಕೇಳುವ ನೋಟಿಸ್ ನೀಡಲಾಗಿತ್ತು. ಮುಖ್ಯಶಿಕ್ಷಕರು ಅಕ್ಟೋಬರ್ 5ರಂದು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ ನಂತರವೂ ಜಯಂತಿಗಳನ್ನು ಆಚರಿಸದಿರುವುದು ಕಂಡುಬಂದಿದೆ ಎಂದು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಆದೇಶ ಪಾಲಿಸದೆ ಕರ್ತವ್ಯಲೋಪ ಎಸಗಿರುವುದು ಹಾಗೂ ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಾವಳಿ-2021ರ ನಿಯಮ 3ರ ಉಪನಿಯಮಗಳಾದ (1), (2) ಮತ್ತು (3) ಉಲ್ಲಂಘಿಸಿರುವ ಆರೋಪದಡಿ ಅಮಾನತು ಕ್ರಮ ಕೈಗೊಳ್ಳಲಾಗಿದೆ. ಅಮಾನತು ಅವಧಿಯಲ್ಲಿ ನಿಯಮಾನುಸಾರ ಜೀವನಾಂಶ ಭತ್ಯೆ ಪಡೆಯಲು ಮುಖ್ಯಶಿಕ್ಷಕರು ಅರ್ಹರಾಗಿದ್ದು, ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ



ಕಲಬುರಗಿ:

ನಗರದ ವಾರ್ಡ್ ನಂ. 2ರ ಕೆ.ಕೆ. ನಗರದಲ್ಲಿ ತಲೆದೋರಿರುವ ಕುಡಿಯುವ ನೀರಿನ ಸಮಸ್ಯೆಯನ್ನು ತಕ್ಷಣ ಪರಿಹರಿಸಿ, ಸಮರ್ಪಕವಾಗಿ ನೀರು ಪೂರೈಸುವಂತೆ ಆಗ್ರಹಿಸಿ ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಘಟಕದ ನೇತೃತ್ವದಲ್ಲಿ ನಿವಾಸಿಗಳು ಮಂಗಳವಾರ ಮಹಾನಗರ ಪಾಲಿಕೆ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೆ.ಕೆ. ನಗರದಲ್ಲಿ ಕುಡಿಯುವ ನೀರಿನ ಕೊರತೆಯಿಂದ ನಿವಾಸಿಗಳು ಪ್ರತಿದಿನ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ನೀರು ಸಂಗ್ರಹಿಸಲು ಹೆಚ್ಚಿನ ಸಮಯ ವ್ಯಯವಾಗುತ್ತಿರುವುದರಿಂದ ಮಕ್ಕಳು ಶಾಲೆಗೆ ತಡವಾಗಿ ತೆರಳುವಂತಾಗಿದೆ. ಅಲ್ಲದೆ, ಕೂಲಿ ಕಾರ್ಮಿಕರು ಹಾಗೂ ಮಹಿಳೆಯರು ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ. ಕುಡಿಯುವ ನೀರಿನ ಅಭಾವದಿಂದ ಇಲ್ಲಿನ ಜನಜೀವನ ಅಸ್ತವ್ಯಸ್ತಗೊಂಡಿದೆ ಎಂದು ಪ್ರತಿಭಟನಾಕಾರರು ಅಳಲು ತೋಡಿಕೊಂಡರು.

ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ 2026ರ ಸೆಪ್ಟೆಂಬರ್ 29ರಂದು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಲಾಗಿತ್ತು. ಆದರೆ, ಮನವಿ ಸಲ್ಲಿಸಿ ಹಲವು ದಿನಗಳು ಕಳೆದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಕೆ.ಕೆ. ನಗರಕ್ಕೆ ಕೂಡಲೇ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಮಹಾನಗರ ಪಾಲಿಕೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿರಂತರ ಧರಣಿ ನಡೆಸಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸ್ಲಂ ಜನಾಂದೋಲನ ಕರ್ನಾಟಕದ ಜಿಲ್ಲಾ ಸಂಚಾಲಕಿ ರೇಣುಕಾ ಸರಡಗಿ, ಅಧ್ಯಕ್ಷೆ ಗೌರಮ್ಮ ಮಾಕಾ, ಕಾರ್ಯದರ್ಶಿ ಸುನೀತಾ ಎಂ. ಕೊಲ್ಲೂರ ಸೇರಿದಂತೆ ಕೆ.ಕೆ. ನಗರದ ನಿವಾಸಿಗಳಾದ ಪಂಪಣ್ಣ, ಮಲ್ಲಣ್ಣ, ಬಸಲಿಂಗಯ್ಯ, ಶರಣಮ್ಮ, ಸಾನಮ್ಮ ಮತ್ತಿತರರು ಪಾಲ್ಗೊಂಡಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಖರ್ಗೆ ಮಾತಿನ ಬಗ್ಗೆ ಒಣ ವಿವಾದ

ಕಳೆದ ಹನ್ನೆರಡು ವರ್ಷಗಳಿಂದ ದೇಶದ ಅಧಿಕಾರ ಸೂತ್ರ ಹಿಡಿದಿರುವ ಬಿಜೆಪಿ ಭಾರತವನ್ನು ದಿವಾಳಿಯ ಅಂಚಿಗೆ ತಂದು ನಿಲ್ಲಿಸಿದೆ.ಚುನಾವಣೆಯ ಸಂದರ್ಭದಲ್ಲಿ ಜನರಿಗೆ ನೀಡಿರುವ ಯಾವುದೇ ಭರವಸೆಗಳನ್ನು ಈಡೇರಿಸದೆ ಕಾರ್ಪೊರೇಟ್ ಬಂಡವಾಳಶಾಹಿಯ ಲೂಟಿಗೆ ದೇಶವನ್ನು ಬಿಟ್ಟು ಕೊಟ್ಟ ಕೋಮುವಾದಿ ಪಕ್ಷ ಬಿಕ್ಕಟ್ಟಿನ ಸುಳಿಯಿಂದ ಪಾರಾಗುವ ದಾರಿ ಕಾಣದೆ ಜನರ ಗಮನವನ್ನು ಬೇರೆಡೆ ಸೆಳೆಯಲು ದಿನಕ್ಕೊಂದು ವಿವಾದವನ್ನು ಸೃಷ್ಟಿಸುತ್ತಿದೆ.ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಾಡಿದರೆನ್ನಲಾದ ಭಾಷಣದ ಕುರಿತು ವಿವಾದವನ್ನು ಸೃಷ್ಟಿಸಿ ತನ್ನನ್ನು ತಾನು ರಕ್ಷಿಸಿಕೊಳ್ಳಲು ಹತಾಶೆಯ ಮಾರ್ಗವನ್ನು ಹಿಡಿದಿದೆ.

ಬಿಹಾರ ರಾಜಧಾನಿ ಪಾಟ್ನಾದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಕ್ಟೋಬರ್ 26ರಂದು ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆಯವರು ಜನರಿಗೆ ಬೇಡವಾಗಿರುವ ಪ್ರಧಾನಿ ನರೇಂದ್ರ ಮೋದಿಯವರು ಆದಷ್ಟು ಬೇಗ ಪದತ್ಯಾಗ ಮಾಡಿ ಹೋಗುತ್ತಾರೆ ಎಂದು ಹೇಳಿದರು.ಆಗ ಸಭಿಕರಲ್ಲಿದ್ದ ವ್ಯಕ್ತಿಯೊಬ್ಬ ನರೇಂದ್ರ ಮೋದಿ ಅಧಿಕಾರ ಬಿಟ್ಟು ಹೋಗುವುದಿಲ್ಲ ಎಂದು ಕೂಗಿ ಹೇಳಿದ. ಇದರಿಂದ ಸಭೆಯಲ್ಲಿ ಗೊಂದಲ ಉಂಟಾಯಿತು. ಆಗ ಮಲ್ಲಿಕಾರ್ಜುನ ಖರ್ಗೆಯವರು ಮೋದಿ ಮಾತ್ರವಲ್ಲ ಅವರಪ್ಪಕೂಡಾ ಹೋಗುತ್ತಾರೆ ಎಂದು ಧ್ವನಿ ಎತ್ತರಿಸಿ ಹೇಳಿದರು. ಖರ್ಗೆಯವರು ಆಡಿದ ಈ ಮಾತು ಬಿಜೆಪಿ ನಾಯಕರನ್ನು ಕೆರಳಿಸಿದೆ. ಇಂಥ ವಿವಾದವನ್ನು ಉಂಟು ಮಾಡಿ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕಾಯುತ್ತಿದ್ದ ಬಿಜೆಪಿ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಂದು ಅಸ್ತ್ರವಾಗಿ ದುರ್ಬಳಕೆ ಮಾಡಿಕೊಂಡು ಹುಸಿ ವಿವಾದವನ್ನು ಸೃಷ್ಟಿಸಿದೆ.

ಪ್ರತಿಭಟನೆಯ ವೇದಿಕೆಯಲ್ಲಿ ರಾಜಕಾರಣಿಗಳು ಭಾವಾವೇಶದಿಂದ ಆಡಬಾರದ ಮಾತನ್ನು ಆಡಿ ವಿವಾದವನ್ನು ಉಂಟು ಮಾಡುವುದು ಹೊಸದೇನಲ್ಲ.ಬಹುತೇಕ ಎಲ್ಲ ಪಕ್ಷಗಳ ನಾಯಕರು ಆಗಾಗ ಜನರನ್ನು ರಂಜಿಸಲು ಇಂಥ ಅಸಭ್ಯ, ಅಸಹ್ಯ ಹೇಳಿಕೆಯನ್ನು ನೀಡುತ್ತಿರುತ್ತಾರೆ. ಇದರಲ್ಲಿ ಬಿಜೆಪಿ ಹಾಗೂ ಸಂಘ ಪರಿವಾರದ ನಾಯಕರು ಮೊದಲ ಸಾಲಿನಲ್ಲಿ ಇರುತ್ತಾರೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್‌ಶಾ ಸಹಿತ ಬಹುತೇಕ ಛೋಟಾ ನಾಯಕರ ವರೆಗೆ ಎಲ್ಲ ಬಿಜೆಪಿ ನಾಯಕರು ಆಗಾಗ ಇಂಥ ಮಾತನ್ನು ಆಡುತ್ತಲೇ ಇರುತ್ತಾರೆ.

ಹಾಗೆ ನೋಡಿದರೆ ಮಲ್ಲಿಕಾರ್ಜುನ ಖರ್ಗೆಯವರು ಪಾಟ್ನಾದಲ್ಲಿ ಮಾಡಿದ ಭಾಷಣದಲ್ಲಿ ವಿವಾದವನ್ನು ಉಂಟು ಮಾಡುವ ಯಾವ ಪದವನ್ನೂ ಬಳಸಿಲ್ಲ.ಮೋದಿ ಮಾತ್ರವಲ್ಲ ಅವರ ಅಪ್ಪಕೂಡಾ ಹೋಗುತ್ತಾರೆ ಎಂದು ಅವರು ಆಡಿದ ಮಾತಿನಲ್ಲಿ ಆಕ್ಷೇಪಾರ್ಹವಾದುದೇನೂ ಇಲ್ಲ. ಮೋದಿ ಮಾತ್ರವಲ್ಲ ಅವರಪ್ಪಕೂಡಾ ಹೋಗುತ್ತಾರೆ ಎಂದು ಆಡಿದ ಮಾತು ಬೈಗುಳವಲ್ಲ.ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ ಇದು ದೈನಂದಿನ ಆಡು ಭಾಷೆಯಲ್ಲಿ ಬಳಸುವ ಮಾತಾಗಿದೆ. ಶಾಲೆಗೆ ಹೋಗುವುದಿಲ್ಲ ಎಂದು ಪುಟ್ಟ ಮಗು ಹಟ ಹಿಡಿದು ಕೂತಾಗ ಆ ಮಗುವಿನ ತಾಯಿ ನೀನಲ್ಲ ನಿನ್ನ ಅಪ್ಪನೂ ಶಾಲೆಗೆ ಹೋಗುತ್ತಾನೆ ಎಂದು ತಮಾಷೆಯಾಗಿ ಆಡುವ ಮಾತಿನಂತೆ ಇದು ಉತ್ತರ ಕರ್ನಾಟಕದ ಕಲಬುರಗಿ ಯಿಂದ ಬಂದ ಮಲ್ಲಿಕಾರ್ಜುನ ಖರ್ಗೆಯವರು ಸಭಿಕನೊಬ್ಬನ ಮಾತಿನಿಂದ ಆವೇಶಕ್ಕೊಳಗಾಗಿ ಹಿಂದಿ ಭಾಷೆಯಲ್ಲಿ ಈ ಮಾತನ್ನು ಹೇಳಿದ್ದಾರೆ.ಇದನ್ನು ಸರಿಯಾಗಿ ಕೇಳಿಸಿಕೊಳ್ಳದ ಅಥವಾ ಕೇಳಿಸಿಕೊಂಡರೂ ವಿವಾದವನ್ನು ಉಂಟು ಮಾಡಲು ಕಾಯುತ್ತಿದ್ದ ಬಿಜೆಪಿ ನಾಯಕರಿಗೆ ಇದರಿಂದ ವಿರೋಧಿಗಳನ್ನು ಟೀಕಿಸಲು ಹೊಸ ಅಸ್ತ್ರ ದೊರೆತಂತಾಗಿದೆ.

ರಾಜಕೀಯ ವಿರೋಧಿಗಳನ್ನು ,ಭಿನ್ನ ವಿಚಾರ ಧಾರೆಗೆ ಸೇರಿದವರನ್ನು ಬಿಜೆಪಿ ಸೇರಿದಂತೆ ಸಂಘ ಪರಿವಾರದ ನಾಯಕರು ಅತ್ಯಂತ ಹೊಲಸು ಭಾಷೆಯಲ್ಲಿ ಬೈಯುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.ಅವರ ಅಸಭ್ಯ,ಅಸಹ್ಯ ಬೈಗುಳಗಳನ್ನು ಇಲ್ಲಿ ಉಲ್ಲೇಖಿಸಲು ಕೂಡ ಸಂಕೋಚವಾಗುತ್ತದೆ. ಸಂಘದ,

ಬಿಜೆಪಿಯ ಸಾಮಾನ್ಯ ಕಾರ್ಯಕರ್ತರು ಮಾತ್ರವಲ್ಲ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್‌ಶಾ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಇಂದಿರಾಗಾಂಧಿ ಅವರ ಬಗ್ಗೆ ಆಡಿದ,ಆಡುತ್ತಿರುವ ಮಾತುಗಳು ಅವರ ಕೆಟ್ಟ ಸಂಸ್ಕೃತಿಗೆ ಸಾಕ್ಷಿಯಾಗಿದೆ.ಮೋದಿಯವರು ಸೋನಿಯಾ ಗಾಂಧಿ ಅವರ ಬಗ್ಗೆ ಕಾಂಗ್ರೆಸ್ ವಿಧವಾ ಮತ್ತು ಜರ್ಸಿ ಆಕಳು, ಐವತ್ತು ಕೋಟಿ ಗರ್ಲ್ ಫ್ರೆಂಡ್ ಎಂದು ಬಹಿರಂಗವಾಗಿ ಆಡಿದ ಮಾತು ಮನುಷ್ಯರಾದವರು ಆಡುವ ಮಾತಲ್ಲ.

ತಾವು ಮಾತ್ರ ಯಾರ ಬಗ್ಗೆ ಏನನ್ನಾದರೂ ಮಾತನಾಡಬಹುದು, ಆದರೆ ತಮ್ಮ ಬಗ್ಗೆ ಯಾರೂ ಮಾತಾಡ ಕೂಡದು ಎಂಬ ಬಿಜೆಪಿ ನಾಯಕರ ವಿತಂಡವಾದವನ್ನು ಯಾರೂ ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಇರುವುದು ಪ್ರಜಾಪ್ರಭುತ್ವ ವ್ಯವಸ್ಥೆ. ಸ್ವಾತಂತ್ರ್ಯ ಹೋರಾಟದ ನಮ್ಮ ನಾಯಕರು ಅತ್ಯಂತ ಜತನದಿಂದ ಕಾಪಾಡಿಕೊಂಡು ಬಂದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕಾಗಿದೆ.ರಾಜಕೀಯ ಟೀಕೆ,ವಿಮರ್ಶೆಗಳು ಸಭ್ಯತೆಯ ಎಲ್ಲೆಯನ್ನು ದಾಟದಿರಲಿ.ಮುಂಚಿನಂತೆ ಬಾಯಿಗೆ ಬಂದದ್ದನ್ನು ಹೇಳಿ ದಕ್ಕಿಸಿಕೊಳ್ಳುವ ಕಾಲ ಇದಲ್ಲ.ದಿನ ಬೆಳಗಾದರೆ ಎದುರಿಗೆ ಬರುವ ಕ್ಯಾಮರಾಗಳು, ಧ್ವನಿ ವರ್ಧಕಗಳು,ರೆಕಾರ್ಡರುಗಳು ನಾವು ಆಡುವ ಒಂದೊಂದು ಪದವನ್ನು ಸೆರೆ ಹಿಡಿಯುತ್ತವೆ.ಆದ್ದರಿಂದ ಮಾತು ಹದ್ದು ಮೀರಿ ಹೋಗಬಾರದು.

ಬಿಜೆಪಿ, ಕಾಂಗ್ರೆಸ್ ಮಾತ್ರವಲ್ಲ ಅಸ್ತಿತ್ವದಲ್ಲಿರುವ ಎಲ್ಲ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಹಾಗೂ ನಂತರದ ದಿನಗಳಲ್ಲಿ ನಾಲಗೆಯ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬೇಕು.ಯಾವುದೇ ಮಾತನ್ನಾಡಲಿ ಅದು ವೈಯಕ್ತಿಕವಾಗಿ ಇನ್ನೊಬ್ಬರ ಮನಸ್ಸಿ ಗೆ ನೋವಾಗುವಂತೆ ಇರಬಾರದು. ಮಾತು ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬಗೆಗಿನ ಸಂವಾದ ಮತ್ತು ಚರ್ಚೆಗೆ ಸೀಮಿತವಾಗಿರಬೇಕು.ಈ ನಿಟ್ಟಿನಲ್ಲಿ ವಿಭಿನ್ನ ಪಕ್ಷಗಳ ನಾಯಕರು ಒಂದು ಒಮ್ಮತಕ್ಕೆ ಬರುವುದು ಅಗತ್ಯವಾಗಿದೆ.

ರಾಜಕೀಯ ಪಕ್ಷಗಳಲ್ಲಿ, ರಾಜಕೀಯ ನಾಯಕರಲ್ಲಿ ವೈಯಕ್ತಿಕ ದ್ವೇಷ ಇರಬಾರದು. ರಾಜಕೀಯ, ತಾತ್ವಿಕ ಭಿನ್ನಾಭಿಪ್ರಾಯ ಗಳು ಮಾತ್ರ ಇರಬೇಕು. ಪರಸ್ಪರ ವೈಯಕ್ತಿಕ ಸ್ನೇಹ ಸಂಬಂಧಗಳಿರ ಬೇಕು. ಸೋಲು, ಗೆಲುವುಗಳನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕು. ಪ್ರಧಾನಿಯಾಗಿರಲಿ, ಮುಖ್ಯಮಂತ್ರಿ ಯಾಗಿರಲಿ ಅವರು ಕುಳಿತ ಕುರ್ಚಿ ಶಾಶ್ವತವಾದುದಲ್ಲ.ಅಧಿಕಾರದಲ್ಲಿರುವವರು ಹೋಗಲೇ ಬೇಕು.ಅದನ್ನೇ ಮಲ್ಲಿಕಾರ್ಜುನ ಖರ್ಗೆಯವರು ತಮ್ಮದೇ ಭಾಷೆಯಲ್ಲಿ ಹೇಳಿದರೆ ಕೆಂಡದಂಥ ಕೋಪವೇಕೆ? ಇದು ಎಲ್ಲರೂ ಸ್ವಯಂ ವಿಮರ್ಶೆ ಮಾಡಿಕೊಳ್ಳಬೇಕಾದ ಕಾಲ.ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಲಿ.

ಯುಪಿ ಎಂಎಲ್‌ಸಿ ಚುನಾವಣೆ: ಪ್ರಧಾನಿ ಮೋದಿ ಕ್ಷೇತ್ರ ವಾರಾಣಸಿಯಲ್ಲಿ ಎಸ್‌ಪಿಗೆ ಭರ್ಜರಿ ಜಯ

ಉತ್ತರ ಪ್ರದೇಶ ವಿಧಾನ ಪರಿಷತ್ (ಎಂಎಲ್‌ಸಿ) ಚುನಾವಣೆಯಲ್ಲಿ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ (ಎಸ್‌ಪಿ) ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರವಾದ ವಾರಾಣಸಿಯಲ್ಲಿ ಗಮನಾರ್ಹ ಗೆಲುವು ದಾಖಲಿಸಿದೆ. ವಾರಣಾಸಿ ಶಿಕ್ಷಕರ ಕ್ಷೇತ್ರವನ್ನು ತನ್ನಲ್ಲೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಎಸ್‌ಪಿ, ವಾರಾಣಸಿ ಪದವೀಧರರ ಕ್ಷೇತ್ರದಲ್ಲೂ ಭರ್ಜರಿ ಗೆಲುವಿನತ್ತ ದಾಪುಗಾಲಿಟ್ಟಿದೆ.

ಒಟ್ಟು 11 ವಿಧಾನ ಪರಿಷತ್ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ದಿಕ್ಸೂಚಿ ಎಂದೇ ಈ ಫಲಿತಾಂಶವನ್ನು ವಿಶ್ಲೇಷಿಸಲಾಗುತ್ತಿದೆ. ಆಗ್ರಾ ಶಿಕ್ಷಕರ ಕ್ಷೇತ್ರವನ್ನೂ ಸಮಾಜವಾದಿ ಪಕ್ಷ ಗೆದ್ದುಕೊಂಡಿದೆ. ಆದರೆ, ಒಟ್ಟಾರೆ ಫಲಿತಾಂಶದಲ್ಲಿ ಮೇಲುಗೈ ಸಾಧಿಸಿರುವ ಆಡಳಿತಾರೂಢ ಬಿಜೆಪಿ, ಲಖನೌ, ಮೀರತ್-ಸಹಾರನ್‌ಪುರ, ಬರೇಲಿ-ಮೊರಾದಾಬಾದ್ ಶಿಕ್ಷಕರ ಕ್ಷೇತ್ರಗಳು ಹಾಗೂ ಮೀರತ್-ಸಹಾರನ್‌ಪುರ ಪದವೀಧರರ ಕ್ಷೇತ್ರ ಸೇರಿದಂತೆ ಒಟ್ಟು ಐದು ಸ್ಥಾನಗಳಲ್ಲಿ ಜಯಗಳಿಸಿ, ಮತ್ತೊಂದರಲ್ಲಿ ಮುನ್ನಡೆ ಸಾಧಿಸಿದೆ.

ವಾರಾಣಸಿ ವಿಭಾಗವು ವಾರಣಾಸಿ, ಚಂದೌಲಿ, ಗಾಜೀಪುರ, ಜೌನ್‌ಪುರ, ಮಿರ್ಜಾಪುರ, ಸೋನಭದ್ರ, ಭದೋಹಿ ಮತ್ತು ಬಲ್ಲಿಯಾ ಜಿಲ್ಲೆಗಳನ್ನು ಒಳಗೊಂಡಿದೆ. ಪ್ರಧಾನಿಯವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾರಣ ವಾರಣಾಸಿಯ ಎರಡು ಕ್ಷೇತ್ರಗಳ ಫಲಿತಾಂಶ ತೀವ್ರ ಕುತೂಹಲ ಕೆರಳಿಸಿತ್ತು. ವಾರಾಣಸಿ ಶಿಕ್ಷಕರ ಕ್ಷೇತ್ರದಲ್ಲಿ ಎಸ್‌ಪಿಯ ಲಾಲ್ ಬಿಹಾರಿ ಯಾದವ್ ಅವರು ಬಿಜೆಪಿಯ ಪ್ರಮೋದ್ ಕುಮಾರ್ ಮಿಶ್ರಾ ಅವರನ್ನು 4,898 ಮತಗಳ ಅಂತರದಿಂದ ಮಣಿಸಿದ್ದಾರೆ. 2020ರಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಮಿಶ್ರಾ ಕೇವಲ 936 ಮತಗಳಿಂದ ಯಾದವ್ ವಿರುದ್ಧ ಸೋತಿದ್ದರು. ಇತ್ತ, ವಾರಾಣಸಿ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿಯ ಕೇದಾರ್ ನಾಥ್ ಸಿಂಗ್ ವಿರುದ್ಧ ಎಸ್‌ಪಿಯ ಅಶುತೋಷ್ ಸಿನ್ಹಾ ಅವರು ನಿರ್ಣಾಯಕ ಗೆಲುವಿನತ್ತ ಸಾಗಿದ್ದಾರೆ.

ಶಿಕ್ಷಕರ ಕ್ಷೇತ್ರದ ಸೋಲು: ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆಯ ಕರೆಘಂಟೆಯೇ?

ಉಳಿದ ಮೂರು ವಿಧಾನ ಪರಿಷತ್ ಕ್ಷೇತ್ರಗಳಿಗಿಂತ ಬೆಂಗಳೂರು ಶಿಕ್ಷಕರ ಕ್ಷೇತ್ರದ ಫಲಿತಾಂಶ ರಾಜಕೀಯವಾಗಿ ಪರಿಣಾಮ ಬೀರಬಲ್ಲದು. ಡಿ.ಕೆ. ಶಿವಕುಮಾರ್ ಅವರ ನಾಯಕತ್ವವನ್ನು ಒರೆಗೆ ಹಚ್ಚಬಲ್ಲದು. ಒಕ್ಕಲಿಗ ಪ್ರಾಬಲ್ಯದ ಪ್ರದೇಶಗಳ ಒಲವು-ನಿಲುವುಗಳನ್ನು ತಿಳಿಸಬಲ್ಲದು. ಆದರೆ, ಈ ಫಲಿತಾಂಶವೇ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಎನ್ನುವುದು ಕೊಂಚ ಅತಿರೇಕವಾಗಬಲ್ಲದು.

ನಾಲ್ಕು ಕ್ಷೇತ್ರಗಳಲ್ಲಿ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್- ಬಿಜೆಪಿ ಮೈತ್ರಿ (ಎನ್‌ಡಿಎ) ಅಭ್ಯರ್ಥಿಗಳು ಜಯಭೇರಿ ಭಾರಿಸಿದ್ದಾರೆ. ಈ ಚುನಾವಣೆಯನ್ನು ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಎಂದು ಜೆಡಿಎಸ್-ಬಿಜೆಪಿ ಪಕ್ಷಗಳು ಈಗಾಗಲೇ ಪ್ರಚಾರ ಶುರು ಮಾಡಿವೆ. ಆದರೆ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದಂತಹ ವಿಧಾನ ಪರಿಷತ್ ಚುನಾವಣೆಯ ಫಲಿತಾಂಶದಿಂದ ವಿಧಾನಸಭೆ ಚುನಾವಣೆಯನ್ನು ಅಳೆಯಲಾಗದು ಎಂಬುದು ವಾಸ್ತವ. ಅದೇ ರೀತಿ ಈ ಚುನಾವಣೆ ಕಾಂಗ್ರೆಸ್‌ಗೆ ನೀಡಿರುವ ಎಚ್ಚರಿಕೆಯ ಕರೆಘಂಟೆಯೆಂದೂ ನೋಡಬೇಕಾಗುತ್ತದೆ.

ಪಶ್ಚಿಮ ಪದವೀಧರ ಕ್ಷೇತ್ರದಿಂದ ಬಿಜೆಪಿಯ ಎಸ್.ವಿ.ಸಂಕನೂರ ಹ್ಯಾಟ್ರಿಕ್ ಗೆಲುವು ದಾಖಲಿಸಿದ್ದಾರೆ. ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ ನಮೋಶಿ ಸತತ ಐದನೇ ಬಾರಿಗೆ ಆಯ್ಕೆಯಾಗಿದ್ದಾರೆ. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಮೊದಲಿನಿಂದಲೂ ಬಿಜೆಪಿಯದ್ದೇ ಪಾರಮ್ಯ. ಹೀಗಾಗಿ ಅಲ್ಲಿ ಸಾಂಪ್ರದಾಯಿಕ ಬಲಾಢ್ಯ ಸಮುದಾಯಗಳ ಮತದಾರರು ಬಿಜೆಪಿ- ಜೆಡಿಎಸ್ ಜೊತೆ ಇರುವುದರಿಂದ ಸುಲಭವಾಗಿ ಬಿಜೆಪಿ ಅಭ್ಯರ್ಥಿ ಕೆ.ಎಂ.ಸುರೇಶ್ ಗೆಲುವು ದಾಖಲಿಸಿದ್ದಾರೆ. ಈ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಫಲಿತಾಂಶ ನಿರೀಕ್ಷಿತವೆಂದು ಭಾವಿಸಬಹುದಾದರೂ ಬೆಂಗಳೂರು ಶಿಕ್ಷಕರ ಕ್ಷೇತ್ರದ ಫಲಿತಾಂಶ ತೀರಾ ಭಿನ್ನ ಮತ್ತು ಡಿ.ಕೆ. ಶಿವಕುಮಾರ್ ನಾಯಕತ್ವಕ್ಕೆ ಕೊಟ್ಟಿರುವ ರೆಡ್ ಸಿಗ್ನಲ್ ಎಂದೇ ಭಾವಿಸಬೇಕಾಗುತ್ತದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಪುಟ್ಟಣ್ಣನವರದ್ದು ವಿಶಿಷ್ಟ ರಾಜಕೀಯ ಕಥನ. ವಿದ್ಯಾರ್ಥಿ ದಿಸೆಯಿಂದಲೇ ರಾಜಕಾರಣ ಪ್ರವೇಶಿಸಿದ ಪುಟ್ಟಣ್ಣ 2002ರಲ್ಲಿ ಮೊದಲ ಬಾರಿಗೆ ಜೆಡಿಎಸ್‌ನಿಂದ ಬೆಂಗಳೂರು ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾದರು. ಆನಂತರ ಇನ್ನೆರಡು ಅವಧಿಗೆ ಜೆಡಿಎಸ್‌ನಿಂದಲೇ ಗೆದ್ದರು. ಅವರು 2020ರಲ್ಲಿ ಬಿಜೆಪಿಗೆ ಸೇರಿದಾಗ ಜೆಡಿಎಸ್ ಎದುರಾಳಿಯಾಗಿ ನಿಂತಿದ್ದವರು ಎ.ಪಿ. ರಂಗನಾಥ್. ಆದರೆ ಆಗಲೂ ಪುಟ್ಟಣ್ಣ ಜಯಭೇರಿ ಭಾರಿಸಿದರು. ಹಳೆಯ ಪಿಂಚಣಿ ವ್ಯವಸ್ಥೆಗಾಗಿ ದೊಡ್ಡ ಕೂಗು ಎದ್ದಾಗ, ಕೆಲವು ಶಿಕ್ಷಕರು ಆತ್ಮಹತ್ಯೆ ಮಾಡಿಕೊಂಡರು. ''ಶಿಕ್ಷಕರ ಪ್ರತಿನಿಧಿಯಾಗಿ ಉತ್ತತ ಮಟ್ಟದ ಒಂದು ಸಭೆಯನ್ನು ಮಾಡಿಸಲಾಗಲಿಲ್ಲ'' ಎಂಬ ಕಾರಣ ಕೊಟ್ಟು ಪುಟ್ಟಣ್ಣ ಬಿಜೆಪಿ ತೊರೆದರು. ಇದರ ನಡುವೆ 2023ರ ವಿಧಾನಸಭೆ ಚುನಾವಣೆಯಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡರು. ಆದರೆ ಪುಟ್ಟಣ್ಣನವರಿಂದ ತೆರವಾದ ಕ್ಷೇತ್ರಕ್ಕೆ 2024ರಲ್ಲಿ ಉಪಚುನಾವಣೆ ನಡೆದಾಗ, ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ ಪರೀಕ್ಷೆಗಿಳಿದರು. ಈ ವೇಳೆಗಾಗಲೇ ಜೊತೆಯಾಗಿದ್ದ ಜೆಡಿಎಸ್- ಬಿಜೆಪಿ ಪಕ್ಷಗಳ ಅಭ್ಯರ್ಥಿಯಾಗಿ ನಿಂತವರು ಎ.ಪಿ. ರಂಗನಾಥ್. ಆ ಚುನಾವಣೆಯು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರಕ್ಕೆ ಸವಾಲಿನ ಸಂಗತಿಯಾಗಿತ್ತು. ಪುಟ್ಟಣ್ಣ ಯಾವುದೇ ಪಕ್ಷದಲ್ಲಿದ್ದರೂ ನಮ್ಮ ಪ್ರತಿನಿಧಿ ಎಂಬ ಭಾವನೆಯನ್ನು ಹೊಂದಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಎಲೀಟ್ ವರ್ಗಗಳ ಬಲದಿಂದಾಗಿ ಪುಟ್ಟಣ್ಣನವರು ಸುಮಾರು 1,500 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದರು.

ಸತತ ಎರಡು ಸಲ ಸೋತಿದ್ದ ಎ.ಪಿ. ರಂಗನಾಥ್ ಅವರ ಮೇಲಿದ್ದ ಅನುಕಂಪ ಮತ್ತು ಅವರು ಹಾಕಿದ ಕಣ್ಣೀರು ಈಗಿನ ಫಲಿತಾಂಶದ ಮೇಲೆ ಪರಿಣಾಮ ಬಿದ್ದಂತೆ ಕಾಣುತ್ತದೆ. ಪರಿಷತ್ ಚುನಾವಣೆಯಲ್ಲಿ 908 ಮತಗಳ ಅಂತರದಿಂದ ರಂಗನಾಥ್ ಅವರು ಪುಟ್ಟಣ್ಣನವರನ್ನು ಮಣಿಸಿದ್ದಾರೆ. ಇಬ್ಬರ ನಡುವೆಯೂ ತೀವ್ರ ಪೈಪೋಟಿ ನಡೆದಿರುವುದು ಸ್ಪಷ್ಟವಾಗುತ್ತದೆ. ಆದರೆ ಪುಟ್ಟಣ್ಣನವರ ಸೋಲು ಹಲವು ಚರ್ಚೆಗಳಿಗೆ ನಾಂದಿ ಹಾಡುತ್ತದೆ.

2024ರಲ್ಲಿ ಬೈ ಎಲೆಕ್ಷನ್ ನಡೆದಾಗ ನೆಕ್ ಟೂ ನೆಕ್ ಫೈಟ್‌ನಲ್ಲಿ ಪುಟ್ಟಣ್ಣ ಕಡಿಮೆ ಅಂತರದಲ್ಲಾದರೂ ಗೆದ್ದರು. ಅಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಸಿದ್ದರಾಮಯ್ಯ. ಹಾಗೇ ನೋಡಿದರೆ, ಒಕ್ಕಲಿಗ ಸಮುದಾಯದ ಪ್ರಾಬಲ್ಯವಿರುವ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಪುಟ್ಟಣ್ಣ ಅವರನ್ನು ಈ ಬಾರಿ ಗೆಲ್ಲಿಸಿಕೊಳ್ಳಬೇಕಾದದ್ದು ಡಿ.ಕೆ.ಶಿವಕುಮಾರ್ ಅವರಿಗೆ ಪ್ರತಿಷ್ಠೆಯ ವಿಷಯವಾಗಬೇಕಿತ್ತು. ಪುಟ್ಟಣ್ಣ ಗೆದ್ದರೆ, ಅದು ತಮ್ಮ ಒಕ್ಕಲಿಗ ನಾಯಕತ್ವಕ್ಕೆ ಮೈಲೇಜ್ ತಂದುಕೊಡುತ್ತದೆ ಎಂದು ಡಿ.ಕೆ. ಶಿವಕುಮಾರ್ ಭಾವಿಸಬೇಕಿತ್ತು. ಈಗ ಫಲಿತಾಂಶ ಹೊರಬಿದ್ದಿರುವ ಹೊತ್ತಿನಲ್ಲಿ, ಈ ಚುನಾವಣೆಯಲ್ಲಿ ಮುಖ್ಯಮಂತ್ರಿಯವರು ವಹಿಸಿದ ಪಾತ್ರವೇನು ಎಂಬ ಪ್ರಶ್ನೆ ಸಾರ್ವಜನಿಕ ವಲಯದಿಂದ ವ್ಯಕ್ತವಾಗುತ್ತಿದೆ.

ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದಂತಹ ಚುನಾವಣೆಗಳಲ್ಲಿನ ಮತದಾರರು ದೊಡ್ಡ ಮಟ್ಟದಲ್ಲಿ ಸಾಂಪ್ರದಾಯಿಕವಾಗಿ ಮೇಲ್ವರ್ಗದವರೇ ಇದ್ದಾರೆ. ಈ ಕಾರಣಕ್ಕೆ ಪುಟ್ಟಣ್ಣ ಮೊದಲಿನಿಂದಲೂ ತಮ್ಮನ್ನು ಕಾಂಗ್ರೆಸ್ ಅಭ್ಯರ್ಥಿ ಎಂದು ಗುರುತಿಸಿಕೊಂಡು ಹೋಗಿದ್ದಕ್ಕಿಂತ, ''ನಾನು ಪಕ್ಷಾತೀತವಾಗಿ ಬೆಂಬಲ ಪಡೆದ ವ್ಯಕ್ತಿ ಹಾಗೂ ಸಮಸ್ತ ಶಿಕ್ಷಕರೇ ನನ್ನ ಕುಟುಂಬ'' ಎಂಬ ಮನೋಭಾವದಲ್ಲೇ ಚುನಾವಣೆಯನ್ನು ಎದುರಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಪುಟ್ಟಣ್ಣನವರಿಗಿರುವ ಒಲವು ಕೂಡ, ಅವರ ಎಲೀಟ್ ವರ್ಗದ ಪರವಾದ ಧೋರಣೆಗೆ ಕನ್ನಡಿ ಹಿಡಿಯುತ್ತದೆ. ಪುಟ್ಟಣ್ಣನವರಿಗಿರುವ ಈ ಕಾರ್ಪೊರೇಟ್ ಚಹರೆ ಮತ್ತು ಡಿ.ಕೆ. ಶಿವಕುಮಾರ್ ಅವರ ಒಕ್ಕಲಿಗ ನಾಯಕತ್ವದ ಅಧಿಕಾರ ಬಲದಿಂದಾಗಿ ಹೆಚ್ಚಿನ ಮತದಾರರು ಕಾಂಗ್ರೆಸ್‌ಗೆ ವಾಲಬಹುದು ಎಂದೇ ಅಂದಾಜಿಸಲಾಗಿತ್ತು. ಆದರೆ ಫಲಿತಾಂಶದಲ್ಲಿ ಕಾಂಗ್ರೆಸ್‌ಗೆ ಆಘಾತ ಎದುರಾಗಿದೆ.

ನಾಮಪತ್ರ ಸಲ್ಲಿಕೆಯ ದಿನ ಪುಟ್ಟಣ್ಣ ಅವರೊಂದಿಗೆ ಕಾಣಿಸಿಕೊಂಡಿದ್ದು ಬಿಟ್ಟರೆ ಡಿ.ಕೆ. ಶಿವಕುಮಾರ್ ಅವರು ಪ್ರಚಾರದ ಕಣದಲ್ಲಿ ಇರಲೇ ಇಲ್ಲ ಎಂಬ ಟೀಕೆಗಳು ಬಂದಿವೆ. ಪುಟ್ಟಣ್ಣನವರೊಂದಿಗೆ ಸಂಪುಟ ಸಚಿವರು ಪ್ರಚಾರ ಕಾರ್ಯಗಳಲ್ಲಿ ಕೈಜೋಡಿಸಿದ್ದೂ ಕಾಣುವುದಿಲ್ಲ. ಇನ್ನೊಂದೆಡೆ ಬಿಜೆಪಿ-ಜೆಡಿಎಸ್‌ನ ನಾಯಕರು ಹೇಗಾದರೂ ಗೆಲುವು ದಾಖಲಿಸಲೇಬೇಕು ಎಂದು ಶ್ರಮಿಸುತ್ತಿದ್ದದ್ದು ಢಾಳಾಗಿ ಕಾಣಿಸುತ್ತದೆ. ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಹೊರತುಪಡಿಸಿದ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಳೆದುಕೊಂಡಿದ್ದು ಏನು ಇಲ್ಲವಾದರೂ, ಪುಟ್ಟಣ್ಣನವರ ಸೋಲನ್ನು ಒಕ್ಕಲಿಗ ಪ್ರಾಬಲ್ಯದ ಪ್ರದೇಶದಲ್ಲಿ ಡಿ.ಕೆ.ಶಿವಕುಮಾರ್ ತೋರಿರುವ ನಿರ್ಲಕ್ಷ್ಯದ ಭಾಗವಾಗಿಯೂ ನೋಡಬೇಕಾಗುತ್ತದೆ. ಇಲ್ಲಿ ಪುಟ್ಟಣ್ಣನವರ ವೈಯಕ್ತಿಕ ವರ್ಚಸ್ಸಿನ ಜೊತೆಗೆ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದ ಮೇಲೂ ಬರೆ ಬಿದ್ದಿದೆ.

ಮುಂದಿನ ಚುನಾವಣೆಗೆ ಮುನ್ಸೂಚನೆಯೇ?

ಅಂದಹಾಗೆ, ಪರಿಷತ್ ಚುನಾವಣೆಯ ಫಲಿತಾಂಶವು ಮುಂಬರುವ ವಿಧಾನಸಭೆಯ ಫಲಿತಾಂಶವನ್ನು ನಿರ್ಧರಿಸುತ್ತದೆ ಎಂದು ಹೇಳಲಾಗದು. ಪ್ರಧಾನಿ ನರೇಂದ್ರ ಮೋದಿಯವರು ಪ್ರತಿನಿಧಿಸುವ ವಾರಣಾಸಿಯಲ್ಲಿ ನಡೆದ ಶಿಕ್ಷಕರ ಚುನಾವಣೆಯಲ್ಲಿ ಎಸ್.ಪಿ ಅಭ್ಯರ್ಥಿ ಗೆದ್ದಿದ್ದಾರೆ. ಈ ಕಾರಣಕ್ಕೆ ಮೋದಿಯವರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸೋಲುತ್ತಾರೆಂದು ಹೇಳುವುದು, ನಂಬುವುದು ರಾಜಕೀಯ ದಡ್ಡತನವಾಗುತ್ತದೆಯಲ್ಲವೇ? ಆದರೆ ಮೋದಿಯವರ ನಾಯಕತ್ವವನ್ನು ಟೀಕಿಸಲು ವಾರಣಾಸಿ ಫಲಿತಾಂಶ ದೊಡ್ಡ ಅಸ್ತ್ರವಾಗುವುದಂತೂ ಖಚಿತ.

ಅಂತೆಯೇ, ಜೆಡಿಎಸ್-ಬಿಜೆಪಿ ಮೈತ್ರಿಯಿಂದ ಕಾಂಗ್ರೆಸ್‌ಗೆ ದೊಡ್ಡ ಹೊಡೆತ ಬಿದ್ದಿದೆ ಎಂದು ಭಾರೀ ಪ್ರಚಾರ ಮಾಡಲು ಈ ಫಲಿತಾಂಶ ಅವಕಾಶ ನೀಡುವುದರಿಂದ ಇದು ಡಿ.ಕೆ. ಶಿವಕುಮಾರ್ ನಾಯಕತ್ವಕ್ಕೆ ಮುಜುಗರ ತರುವ ಸಂಗತಿಯಾಗುತ್ತದೆ. ಈ ವಿಧಾನ ಪರಿಷತ್ ಚುನಾವಣೆ ನಮ್ಮ ವ್ಯಾಪ್ತಿಗೊಳಪಟ್ಟಿಲ್ಲ ಎಂಬ ಧೋರಣೆಯಲ್ಲಿ ಕಾಂಗ್ರೆಸ್ ಇದ್ದಂತೆಯೂ ಭಾಸವಾಗುತ್ತದೆ. ಒಟ್ಟಾರೆ ಕಾಂಗ್ರೆಸ್ ಪಕ್ಷವು ನಾಲ್ಕು ಕ್ಷೇತ್ರಗಳ ಪರಿಷತ್ ಚುನಾವಣೆಯನ್ನು ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಂಡಿದೆ ಎಂಬುದೂ ಜಗಜ್ಜಾಹೀರಾಗುತ್ತದೆ.

ರಾಜ್ಯದ ಬಹುತೇಕ ಎಲೀಟ್ ಎನಿಸುವ ವರ್ಗಗಳನ್ನು ಪ್ರತಿನಿಧಿಸುವ ಚುನಾವಣೆ ಎಂದಿಗೂ ರಾಜ್ಯದ ಪ್ರತಿ ಮತದಾರರ ನಡುವೆ ನಡೆಯುವ ವಿಧಾನಸಭಾ ಚುನಾವಣೆಯನ್ನು ನಿರ್ಧರಿಸಲಾರದು. ಮೇಲ್ಮನೆಗೂ, ಕೆಳಮನೆಗೂ ದೊಡ್ಡ ವ್ಯತ್ಯಾಸಗಳಿವೆ ಎಂಬುದೂ ಅಷ್ಟೇ ಮುಖ್ಯ. ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಸಮುದಾಯಗಳ ಮತದಾರರು ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಲ್ಲಿ ನಿರ್ಣಾಯಕ ಮಟ್ಟದಲ್ಲಿ ಇಲ್ಲದಿರುವುದರಿಂದ ಮೇಲ್ಮನೆಯು ಎಂದಿಗೂ ಕೆಳಮನೆಯನ್ನು ನಿರ್ಧರಿಸುವುದಿಲ್ಲ. ಹೀಗಾಗಿ ಎನ್.ಡಿ.ಎ ಮೈತ್ರಿಕೂಟವು ವಿಧಾನಸಭೆಯನ್ನೂ ಗೆದ್ದು ಬೀಗುತ್ತದೆ ಎಂದು ನಂಬುವುದು ಅತಿರೇಕವಾಗುತ್ತದೆ.

ರಾಯಚೂರಿನ ಗ್ರಾಮಗಳಲ್ಲಿ ಫ್ಲೋರೈಡ್ ಆತಂಕ

ಸುರಕ್ಷಿತ ಕುಡಿಯುವ ನೀರಿಗೆ ಸರ್ಕಾರ ಕ್ರಮ ಕೈಗೊಳ್ಳಲಿ!

ಡಾ. ಶಿಲ್ಪಕಲಾ ಅವರ ಸಂಶೋಧನೆಯಿಂದ ಬೆಳಕಿಗೆ ಬಂದ ಅಂತರ್ಜಲ ಫ್ಲೋರೈಡ್ ಸಮಸ್ಯೆ: ಗ್ರಾಮೀಣ ಜನರ ಆರೋಗ್ಯ ರಕ್ಷಣೆಗೆ ತುರ್ತು ಕ್ರಮ ಅಗತ್ಯ

ರಾಯಚೂರು: ಕುಡಿಯುವ ನೀರು ಪ್ರತಿಯೊಬ್ಬರ ಮೂಲಭೂತ ಅವಶ್ಯಕತೆ. ಆದರೆ

ಕುಡಿಯುವ ನೀರಿನಲ್ಲಿಯೇ ಆರೋಗ್ಯಕ್ಕೆ ಅಪಾಯ ಉಂಟುಮಾಡುವ ರಾಸಾಯನಿಕ ಅಂಶಗಳು ಅಧಿಕ ಪ್ರಮಾಣದಲ್ಲಿದ್ದರೆ, ಅದು ಜನರ ಆರೋಗ್ಯ ಮತ್ತು ಜೀವನದ ಗುಣಮಟ್ಟದ ಮೇಲೆ ಗಂಭೀರ ಪರಿಣಾಮ ಬೀರಬಹುದು. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಅಂತರ್ಜಲದಲ್ಲಿರುವ ಅಧಿಕ ಫ್ಲೋರೈಡ್ ಪ್ರಮಾಣವು ಇಂತಹ ಆತಂಕಕ್ಕೆ ಕಾರಣವಾಗಿದೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಜನರಿಗೆ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗಳು ತುರ್ತು ಕ್ರಮ ಕೈಗೊಳ್ಳಬೇಕಾಗಿದೆ.

- **ದೇವದುರ್ಗ ತಾಲ್ಲೂಕಿನಲ್ಲಿ ಫ್ಲೋರೈಡ್ ಸಮಸ್ಯೆಯ ಅಧ್ಯಯನ**


Fig. 13. (a) Azadirachta indica, (b) bark material and (c) Activated carbon
Fig. 14. (a) Prosopis juliflora (Sw.) DC, (b) bark material and (c) Activated carbon

ದೇವದುರ್ಗ ತಾಲ್ಲೂಕಿನ ಗುಂಟ್ರಾಳ, ಹಿರೇಬೂದೂರು, ಮಶಿಹಾಳ ಮತ್ತು ಶವಂತಗೇರಾ ಗ್ರಾಮಗಳಲ್ಲಿ 2020ರಿಂದ 2022ರವರೆಗೆ ನಡೆಸಿದ ಅಂತರ್ಜಲ ಗುಣಮಟ್ಟದ ಸಂಶೋಧನೆಯಲ್ಲಿ ಫ್ಲೋರೈಡ್ ಮಾಲಿನ್ಯದ ಕುರಿತು ಅಧ್ಯಯನ ಮಾಡಲಾಗಿದೆ. ಈ ಸಂಶೋಧನೆಯಲ್ಲಿ ಒಟ್ಟು 48 ಅಂತರ್ಜಲ ಮಾದರಿಗಳನ್ನು ಸಂಗ್ರಹಿಸಿ, ಅವುಗಳ ಗುಣಮಟ್ಟವನ್ನು ಪರಿಶೀಲಿಸಲಾಗಿದೆ.

ಅಧ್ಯಯನದ ಫಲಿತಾಂಶಗಳು ಕೆಲವು ಮಾದರಿಗಳಲ್ಲಿ ಫ್ಲೋರೈಡ್ ಪ್ರಮಾಣವು ಕುಡಿಯುವ ನೀರಿಗೆ ಸಾಮಾನ್ಯವಾಗಿ ಉಲ್ಲೇಖಿಸುವ 1.5 ಮಿ.ಗ್ರಾಂ/ಲೀಟರ್ ಮಿತಿಗಿಂತ ಹಲವು ಪಟ್ಟು ಹೆಚ್ಚಿರುವುದನ್ನು ಸೂಚಿಸಿವೆ. ವಿಶೇಷವಾಗಿ ಗುಂಟ್ರಾಳ ಗ್ರಾಮದಲ್ಲಿ ಕೆಲವು ಮಾದರಿಗಳಲ್ಲಿ ಫ್ಲೋರೈಡ್ ಪ್ರಮಾಣ 6.7ರಿಂದ 9.5 ಮಿ.ಗ್ರಾಂ/ಲೀಟರ್‌ವರೆಗೆ ದಾಖಲಾಗಿತ್ತು. ಇಂತಹ ಹೆಚ್ಚಿನ ಸಾಂದ್ರತೆಯ ನೀರನ್ನು ದೀರ್ಘಕಾಲ ಕುಡಿಯುವುದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಗಂಭೀರ ಕಳವಳದ ವಿಷಯವಾಗಿದೆ.

ಫ್ಲೋರೈಡ್ ಒಂದು ನಿರ್ದಿಷ್ಟ ಪ್ರಮಾಣದವರೆಗೆ



Fig. 23. Dental fluorosis in Shavantgera village
Fig. 24. Skeletal fluorosis in Shavantgera village


Fig. 21. Dental fluorosis in Hirebudur village
Fig. 22. Skeletal fluorosis in Hirebudur village


Fig. 19. Dental fluorosis in Guntral village
Fig. 20. Skeletal fluorosis in Guntral village

ದೇಹಕ್ಕೆ ಅಗತ್ಯವಾದರೂ, ಅತಿಯಾದ ಪ್ರಮಾಣದಲ್ಲಿ ದೀರ್ಘಕಾಲ ಸೇವಿಸಿದಾಗ ಹಲ್ಲುಗಳ ಮೇಲೆ ಬಿಳಿ ಅಥವಾ ಕಂದು ಬಣ್ಣದ ಕಲೆಗಳು ಕಾಣಿಸಿಕೊಳ್ಳುವ ದಂತ ಫ್ಲೋರೋಸಿಸ್ ಹಾಗೂ ಮೂಳೆಗಳಿಗೆ ಸಂಬಂಧಿಸಿದ ಅಸ್ಥಿ ಫ್ಲೋರೋಸಿಸ್ ಉಂಟಾಗುವ ಅಪಾಯವಿದೆ. ಹೀಗಾಗಿ ನೀರಿನ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸುವುದು ಮತ್ತು ಸುರಕ್ಷಿತ ನೀರಿನ ಲಭ್ಯತೆಯನ್ನು ಖಚಿತಪಡಿಸುವುದು ಅತ್ಯಂತ ಅಗತ್ಯವಾಗಿದೆ.

- **ಸಮಸ್ಯೆ ಪತ್ತೆಹಚ್ಚುವುದಷ್ಟೇ ಅಲ್ಲ, ಪರಿಹಾರ ಕಂಡುಕೊಳ್ಳುವುದೂ ಮುಖ್ಯ**

ಫ್ಲೋರೈಡ್ ಮಾಲಿನ್ಯದ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ, ಸ್ಥಳೀಯ ಪರಿಸ್ಥಿತಿಗೆ ಸೂಕ್ತವಾದ ಕಡಿಮೆ ವೆಚ್ಚದ ಮತ್ತು ಪರಿಸರ ಸ್ನೇಹಿ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಈ ಉದ್ದೇಶದಿಂದ ನನ್ನ ಸಂಶೋಧನೆಯಲ್ಲಿ ಂದಚಿಜಡಿಚಿಛಿಣಚಿ ಂಟಿ-ಜುಛಿಚಿ (ಬೇವು) ಮತ್ತು ಕಡಿಠಿಠಿಖ ರಿಣಟುಜಿಟರ-ಡಿಚಿ ಮರಗಳ ತೊಗಟೆಯನ್ನು ಬಳಸಿ ನೀರಿನಿಂದ ಫ್ಲೋರೈಡ್‌ನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಪ್ರಯೋಗಾಲಯದಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನವು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಫ್ಲೋರೈಡ್ ಕಡಿಮೆ ಮಾಡುವ ಸಾಧ್ಯತೆಗಳ ಬಗ್ಗೆ ಭರವಸೆಯ ಫಲಿತಾಂಶಗಳನ್ನು ನೀಡಿದೆ. ಆದರೆ ಪ್ರಯೋಗಾಲಯದಲ್ಲಿ ದೊರೆತ ಫಲಿತಾಂಶಗಳನ್ನು ನೇರವಾಗಿ ಗ್ರಾಮಗಳ ಕುಡಿಯುವ ನೀರಿಗೆ ಅನ್ವಯಿಸುವ ಮೊದಲು, ಅವುಗಳ ಸುರಕ್ಷತೆ, ಪರಿಣಾಮಕಾರಿತ್ವ, ದೀರ್ಘಕಾಲೀನ ಕಾರ್ಯಕ್ಷಮತೆ ಮತ್ತು ನಿರ್ವಹಣಾ ವೆಚ್ಚವನ್ನು ಸೂಕ್ತ ತಾಂತ್ರಿಕ ಪರೀಕ್ಷೆಗಳ ಮೂಲಕ ಖಚಿತಪಡಿಸಿಕೊಳ್ಳಬೇಕು. ಸಂಶೋಧನೆಯ ಉದ್ದೇಶ ಕೇವಲ ವೈಜ್ಞಾನಿಕ ಪ್ರಕಟಣೆಗಳಿಗೆ ಸೀಮಿತವಾಗಬಾರದು. ಅದರ ಫಲಿತಾಂಶಗಳು ಜನರ ಬದುಕಿಗೆ ಪ್ರಯೋಜನವಾಗುವಂತೆ, ಸರ್ಕಾರದ ಸಹಕಾರದೊಂದಿಗೆ ಕ್ಷೇತ್ರಮಟ್ಟದಲ್ಲಿ ಪರೀಕ್ಷಿಸಿ ಅನುಷ್ಠಾನಗೊಳಿಸುವ ಪ್ರಯತ್ನಗಳು ನಡೆಯಬೇಕು.

- **ಸರ್ಕಾರ ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳು**

ರಾಯಚೂರು ಜಿಲ್ಲೆಯ ಫ್ಲೋರೈಡ್ ಸಮಸ್ಯೆಗೆ ಶಾಶ್ವತ ಮತ್ತು ಜನಸ್ನೇಹಿ ಪರಿಹಾರ ಕಲ್ಪಿಸಲು ಸರ್ಕಾರವು



ಲೇಖನ: ಡಾ. ಶಿಲ್ಪಕಲಾ
ಪರಿಸರ ವಿಜ್ಞಾನ ಸಂಶೋಧಕಿ
ಸಂಶೋಧನಾ ಕ್ಷೇತ್ರ: ಅಂತರ್ಜಲ ಗುಣಮಟ್ಟ, ಫ್ಲೋರೈಡ್ ಮಾಲಿನ್ಯ ಮತ್ತು ಪರಿಸರ ಸ್ನೇಹಿ ಫ್ಲೋರೈಡ್ ನಿವಾರಣೆ

ಕೆಳಗಿನ ಕ್ರಮಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಬೇಕು.

- **ಗ್ರಾಮವಾರು ಕುಡಿಯುವ ನೀರಿನ ಪರೀಕ್ಷೆ:**

ದೇವದುರ್ಗ ತಾಲ್ಲೂಕಿನ ಫ್ಲೋರೈಡ್ ಸಮಸ್ಯೆ ಇರುವ ಗ್ರಾಮಗಳ ಬೋರ್‌ವೆಲ್‌ಗಳು, ಕೈಪಂಪುಗಳು ಮತ್ತು ಇತರ ಕುಡಿಯುವ ನೀರಿನ ಮೂಲಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಬೇಕು. ಪರೀಕ್ಷೆಯ ಫಲಿತಾಂಶಗಳನ್ನು ಸಾರ್ವಜನಿಕರಿಗೆ ಸರಳವಾಗಿ ತಿಳಿಸಬೇಕು.

- **ಸುರಕ್ಷಿತ ಪರ್ಯಾಯ ನೀರಿನ ವ್ಯವಸ್ಥೆ:**

ಫ್ಲೋರೈಡ್ ಪ್ರಮಾಣ ಅಧಿಕವಾಗಿರುವ ಮೂಲಗಳ ಮೇಲೆ ಅವಲಂಬಿತರಾಗಿರುವ ಕುಟುಂಬಗಳಿಗೆ ಪರೀಕ್ಷೆಯಿಂದ ಸುರಕ್ಷಿತವೆಂದು ದೃಢಪಟ್ಟ ಪರ್ಯಾಯ ಕುಡಿಯುವ ನೀರನ್ನು ಒದಗಿಸಬೇಕು. ಅಗತ್ಯವಿದ್ದಲ್ಲಿ ಶುದ್ಧೀಕರಿಸಿದ ನೀರಿನ ಘಟಕಗಳನ್ನು ಸ್ಥಾಪಿಸಬೇಕು.

- **ಗ್ರಾಮಮಟ್ಟದ ನೀರು ಶುದ್ಧೀಕರಣ ಘಟಕಗಳು:**

ಸ್ಥಳೀಯ ನೀರಿನ ಗುಣಲಕ್ಷಣಗಳಿಗೆ ಅನುಗುಣವಾಗಿ ಸೂಕ್ತವಾದ ಫ್ಲೋರೈಡ್ ನಿವಾರಣಾ ತಂತ್ರಜ್ಞಾನಗಳನ್ನು ಆಯ್ಕೆಮಾಡಿ, ಅವುಗಳ ನಿಯಮಿತ ನಿರ್ವಹಣೆ, ಫಿಲ್ಟರ್ ಬದಲಾವಣೆ ಮತ್ತು ಶುದ್ಧೀಕರಿಸಿದ ನೀರಿನ ಗುಣಮಟ್ಟದ ಮೇಲ್ವಿಚಾರಣೆಯನ್ನು ಖಚಿತಪಡಿಸಬೇಕು.

- **ಆರೋಗ್ಯ ತಪಾಸಣೆ ಮತ್ತು ಜಾಗೃತಿ:**

ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಅಗತ್ಯವಿರುವ ಗ್ರಾಮಗಳಲ್ಲಿ ದಂತ ಮತ್ತು ಅಸ್ಥಿ ಫ್ಲೋರೋಸಿಸ್ ತಪಾಸಣೆ ನಡೆಸಬೇಕು. ಶಾಲಾ ಮಕ್ಕಳು ಸೇರಿದಂತೆ ಜನರಿಗೆ ಫ್ಲೋರೈಡ್‌ನ ಅಪಾಯಗಳು ಮತ್ತು ಸುರಕ್ಷಿತ ನೀರಿನ ಬಳಕೆಯ ಕುರಿತು ಅರಿವು ಮೂಡಿಸಬೇಕು.

- **ಸಂಶೋಧನೆಗೆ ಸರ್ಕಾರದ ಬೆಂಬಲ:**

ಸ್ಥಳೀಯ ವಿಶ್ವವಿದ್ಯಾಲಯಗಳು ಮತ್ತು ಸಂಶೋಧಕರೊಂದಿಗೆ ಕೈಜೋಡಿಸಿ ಕಡಿಮೆ ವೆಚ್ಚದ, ಪರಿಸರ ಸ್ನೇಹಿ ಮತ್ತು ವೈಜ್ಞಾನಿಕವಾಗಿ ದೃಢೀಕರಿಸಿದ ಫ್ಲೋರೈಡ್ ನಿವಾರಣಾ ವಿಧಾನಗಳ ಕ್ಷೇತ್ರಮಟ್ಟದ ಪ್ರಯೋಗಗಳಿಗೆ ನೆರವು ನೀಡಬೇಕು.

- **ನಿರಂತರ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ:**

ಗ್ರಾಮ ಪಂಚಾಯಿತಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳು ಹಾಗೂ ಆರೋಗ್ಯ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಿ, ನೀರಿನ ಗುಣಮಟ್ಟದ ವರದಿಗಳು, ಶುದ್ಧೀಕರಣ ಘಟಕಗಳ ನಿರ್ವಹಣೆ ಮತ್ತು ಸಾರ್ವಜನಿಕ ದೂರುಗಳಿಗೆ ಸ್ಪಂದಿಸುವ ವ್ಯವಸ್ಥೆಯನ್ನು ರೂಪಿಸಬೇಕು.

- **ಸಂಶೋಧನೆ ಜನರ ಬದುಕಿಗೆ ತಲುಪಲಿ**

ಗ್ರಾಮೀಣ ಪ್ರದೇಶಗಳಲ್ಲಿನ ನೀರಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಶೋಧಕರು, ಸರ್ಕಾರ ಮತ್ತು ಸಾರ್ವಜನಿಕರು ಒಟ್ಟಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಫ್ಲೋರೈಡ್ ಸಮಸ್ಯೆಯನ್ನು ಕೇವಲ ಪ್ರಯೋಗಾಲಯದ ಫಲಿತಾಂಶವಾಗಿ ಅಥವಾ ವೈಜ್ಞಾನಿಕ ವರದಿಯಾಗಿ ನೋಡದೆ, ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷಿತ ಕುಡಿಯುವ ನೀರಿನ ಹಕ್ಕಿಗೆ ಸಂಬಂಧಿಸಿದ ವಿಷಯವಾಗಿ ಪರಿಗಣಿಸಬೇಕು. ರಾಯಚೂರು ಜಿಲ್ಲೆಯ ಗ್ರಾಮಗಳಲ್ಲಿ ಅಂತರ್ಜಲದ ಗುಣಮಟ್ಟದ ಕುರಿತು ಇನ್ನಷ್ಟು ಸಮಗ್ರ ಸಮೀಕ್ಷೆ ನಡೆಸಿ, ಅಪಾಯದಲ್ಲಿರುವ ಜನರಿಗೆ ತಕ್ಷಣದ ನೆರವು ಒದಗಿಸಬೇಕು. ಸಂಶೋಧನೆಯಿಂದ ಗುರುತಿಸಲಾದ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ರೂಪಿಸಿ, ಅವುಗಳನ್ನು ಜನರಿಗೆ ತಲುಪಿಸುವಲ್ಲಿ ಜಿಲ್ಲಾಡಳಿತ ಮತ್ತು ಸಂಬಂಧಿಸಿದ ಇಲಾಖೆಗಳು ಮುಂಚೂಣಿಯಲ್ಲಿ ನಿಲ್ಲಬೇಕು. ಸುರಕ್ಷಿತ ಕುಡಿಯುವ ನೀರು ಐಷಾರಾಮಿ ಸೌಲಭ್ಯವಲ್ಲ; ಅದು ಪ್ರತಿಯೊಬ್ಬರ ಆರೋಗ್ಯ ಮತ್ತು ಗೌರವಯುತ ಜೀವನಕ್ಕೆ ಅಗತ್ಯವಾದ ಮೂಲಭೂತ ಅವಶ್ಯಕತೆ. ರಾಯಚೂರು ಜಿಲ್ಲೆಯ ಫ್ಲೋರೈಡ್ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ವೈಜ್ಞಾನಿಕ ಸಾಕ್ಷ್ಯಾಧಾರಿತ, ಕಡಿಮೆ ವೆಚ್ಚದ ಮತ್ತು ದೀರ್ಘಕಾಲೀನ ಪರಿಹಾರಗಳನ್ನು ಜಾರಿಗೆ ತರಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಲಿ.











1. ಪ್ರೊ. ಜೆ. ನಾರಾಯಣ, ನಿವೃತ್ತ ಪ್ರಾಧ್ಯಾಪಕರು, ಪರಿಸರ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ (ಸಂಶೋಧನಾ ಮಾರ್ಗದರ್ಶಕರು)

2. ಡಾ. ಪ್ರಕಾಶ್ ಕರಿಯಜ್ಜಣ್ಣವರ್, ಸಹಾಯಕ ಪ್ರಾಧ್ಯಾಪಕರು, ಪರಿಸರ ವಿಜ್ಞಾನ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

3. ಡಾ. ಶಿಲ್ಪಕಲಾ, ಸಂಶೋಧಕಿ ಮತ್ತು ಅತಿಥಿ ಉಪನ್ಯಾಸಕರು, ಪರಿಸರ ವಿಜ್ಞಾನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು (GFGC), ರಾಯಚೂರು

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR